# 1. ಹೃದಯ ವೈಶಾಲ್ಯ

## ಪೀಠಿಕೆ

ನಮ್ಮ ದೇಶದಲ್ಲಿ ವಿವಿಧ ಭಾಷೆಗಳನ್ನಾಡುವವರೂ ಬೇರೆ ಬೇರೆ ಮತಾವಲಂಬಿಗಳೂ ಇದ್ದಾರೆ. ನಮ್ಮೆಲ್ಲರ ನಂಬಿಕೆ, ಸಂಪ್ರದಾಯ, ನಡೆನುಡಿ, ವೇಷಭೂಷಣಗಳು ವಿಭಿನ್ನವಾದರೂ ನಾವು ಒಗ್ಗಟ್ಟಿನಿಂದ ಬಾಳಬೇಕಾಗಿದೆ. ಇತರರ ಧರ್ಮ ಮತ್ತು ನಂಬಿಕೆಗಳನ್ನು ಗೌರವಿಸುವುದರೊಂದಿಗೆ ಎಲ್ಲರಿಗೂ ಸ್ವತಂತ್ರರಾಗಿ ಬದುಕುವ ಅವಕಾಶ ದೊರಕಬೇಕು ಎಂಬ ಮನೋಭಾವವನ್ನು ಮಕ್ಕಳಲ್ಲಿ ಮೂಡಿಸುವುದು ಈ ಘಟಕದ ಉದ್ದೇಶವಾಗಿದೆ. ಇದಕ್ಕಾಗಿ 'ಈ ಮಣ್ಣು ನಮ್ಮದು' ಪದ್ಯವನ್ನು, 'ವಿಶಾಲ ಹೃದಯದ ಕಪಿ' ಎಂಬ ಕಥೆಯನ್ನು ಹಾಗೂ 'ಶರಣರ ವಚನ'ಗಳನ್ನು ನೀಡಲಾಗಿದೆ. ಇವುಗಳನ್ನು ಓದಿ ಆಸ್ವಾದಿಸುವುದರೊಂದಿಗೆ ಭಾಷಣ, ಟಿಪ್ಪಣಿ ಮುಂತಾದ ಭಾಷಾ ವ್ಯವಹಾರ ರೂಪಗಳನ್ನು ವಿದ್ಯಾರ್ಥಿಗಳು ತಮ್ಮದಾಗಿಸಿಕೊಳ್ಳಲು ಉದ್ದೇಶಿಸಲಾಗಿದೆ. ಇದರೊಂದಿಗೆ ವಿದ್ಯಾರ್ಥಿಯಲ್ಲಿ ಸೃಜನಶೀಲತೆಯನ್ನು ಬೆಳೆಸುವ ಮತ್ತು ಅಭಿನಯ ಕೌಶಲವನ್ನು ಅಭಿವೃದ್ಧಿಗೊಳಿಸುವ ಅವಕಾಶವನ್ನು ನೀಡಲಾಗಿದೆ.

## ಕಲಿಕಾ ಸಾಧನೆಗಳು

- ಕಥೆ, ಕವಿತೆಗಳನ್ನು ಸೂಕ್ತವಾದ ಭಾವಾಭಿವ್ಯಕ್ತಿಯೊಂದಿಗೆ ಮಂಡಿಸುವುದು.
- ಕಥೆ, ಕವಿತೆ, ನಾಟಕ ಮೊದಲಾದ ಸೃಜನಾತ್ಮಕ ರಚನೆಗಳ ರಚನಾ ರೀತಿ, ಔಚಿತ್ಯ, ವೈವಿಧ್ಯ ಮೊದಲಾದವುಗಳನ್ನು ಪರಿಗಣಿಸಿಕೊಂಡು ಆಸ್ವಾದಿಸಿ ಸ್ವಂತ ದೃಷ್ಟಿಕೋನಕ್ಕನುಸಾರವಾಗಿ ವಾಚಿಕವಾಗಿ ಮಂಡಿಸುವುದು ಮತ್ತು ಬರೆದು ಮಂಡಿಸುವುದು.
- ಕಥಾ ಪಾತ್ರಗಳ ಮಾನಸಿಕ ಸ್ಥಿತಿ, ಕತೆ, ಕವಿತೆಗಳಲ್ಲಿ ಅವುಗಳಿಗಿರುವ ಸ್ಥಾನ ಎಂಬಿವುಗಳನ್ನು ಕಂಡುಕೊಂಡು ವಾಚಿಕವಾಗಿಯೂ ಲಿಖಿತರೂಪದಲ್ಲೂ ಪಾತ್ರಚಿತ್ರಣ ಮಾಡುವುದು.
- ಓದಿದ ಸೃಜನಾತ್ಮಕ ರಚನೆಗಳನ್ನು ವಿಭಿನ್ನ ಮತ್ತು ಸೂಕ್ತ ರೀತಿಯಲ್ಲಿ ಪುನರಾವಿಷ್ಕರಿಸುವುದು.
- ವಿವಿಧ ಆಶಯ ಮಂಡಲಗಳಿಗೆ ಸಂಬಂಧಿಸಿದ ಚರ್ಚೆ ಸಂವಾದಗಳಲ್ಲಿ ಭಾಗವಹಿಸಿ ಆಶಯಗಳನ್ನು ಅಭಿಪ್ರಾಯಗಳನ್ನು ತರ್ಕಬದ್ಧವಾಗಿ ಮಂಡಿಸುವುದು.
- ಚರ್ಚೆ ಸಂವಾದಗಳಿಂದ ರೂಪುಗೊಂಡ ಆಶಯಗಳನ್ನು ಕ್ರೋಡೀಕರಿಸಿ ವಾಚಿಕವಾಗಿಯೂ ಲಿಖಿತ ರೂಪದಲ್ಲಿಯೂ ಪ್ರಕಟಿಸುವುದು.
- ಸಾಮಾಜಿಕ ಮಹತ್ವವುಳ್ಳ ವಿಷಯಗಳನ್ನು ಆಧಾರವಾಗಿರಿಸಿ ಪ್ರಬಂಧ, ಮನವಿ, ಭಾಷಣ ಇತ್ಯಾದಿಗಳನ್ನು ರಚಿಸುವುದು.
- ಪಾಠಭಾಗಗಳಿಂದ ಆರ್ಜಿಸಿದ ಭಾಷಾಪರವೂ ಆಶಯಪರವೂ ಆದ ಸಾಮರ್ಥ್ಯಗಳನ್ನು ಉಪಯೋಗಿಸಿಕೊಂಡು ಸ್ವತಂತ್ರವಾದ ಸೃಜನಾತ್ಮಕ ರಚನೆಗಳನ್ನು ಮಾಡುವುದು.

## ಯೂನಿಟ್ ಗ್ರಿಡ್ – ಘಟಕ 1. ಹೃದಯ ವೈಶಾಲ್ಯ

**ಸಮಯ : 20 ಪಿರೇಡುಗಳು**

| ಪಾಠದ ಹೆಸರು | ಆಶಯ / ಉದ್ದೇಶ | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
|---|---|---|---|---|
| ಈ ಮಣ್ಣು ನಮ್ಮದು | • ನಮ್ಮ ದೇಶವು ಪ್ರಾದೇಶಿಕ ಹಾಗೂ ಸಾಂಸ್ಕೃತಿಕ ವೈವಿಧ್ಯಗಳಿಂದ ಕೂಡಿದೆ ಎಂಬುದನ್ನು ಮನದಟ್ಟು ಮಾಡಿಸುವುದು.<br>• ದೇಶ ಭಕ್ತಿಗೀತೆಗಳನ್ನು ಆಲಿಸುವುದಕ್ಕೂ, ಹಾಡುವುದಕ್ಕೂ, ಸ್ವತಂತ್ರ ರಚನೆಗಳನ್ನು ಮಾಡುವುದಕ್ಕೂ ಪ್ರೇರೇಪಿಸುವುದು. | • ಪದ್ಯವನ್ನು ಹಾಡುವುದು, ಚರ್ಚೆಯಲ್ಲಿ ಭಾಗವಹಿಸುವುದು, ಪ್ರಶ್ನೆಗಳಿಗೆ ಉತ್ತರ ಬರೆಯುವುದು, ಭಾಷಣ ತಯಾರಿಸುವುದು, ಪ್ರಾಸಪದಗಳನ್ನು ಗುರುತಿಸಿ ಬರೆಯುವುದು.<br>• ಘೋಷಣಾ ವಾಕ್ಯ ರಚಿಸುವುದು, ಸ್ವಾರಸ್ಯ ಬರೆಯುವುದು. ಸಂಚಿಕೆ ತಯಾರಿಸುವುದು, | • ದೇಶ ಭಕ್ತಿ ಗೀತೆಗಳ ಧ್ವನಿಮುದ್ರಿಕೆ,<br>• ವಿಡಿಯೋ ಕ್ಲಿಪ್ಪಿಂಗ್<br>• ಹಾಡುವಿಕೆ<br>• ಲಿಖಿತಭಾಷಣ<br>• ಸಂಚಿಕೆ | |
| ವಿಶಾಲ ಹೃದಯಿ ಕಪಿ | • ಇತರರಿಗೆ ಸಹಾಯ ಮಾಡುವುದು ಮಾನವ ಸಹಜ ಧರ್ಮವಾಗಿದೆ.<br>• ಜವಾಬ್ದಾರಿಯುತ ವ್ಯಕ್ತಿಗಳು ತಮ್ಮ ಪ್ರಾಣವನ್ನು ಒತ್ತೆ ಇಟ್ಟಾದರೂ ಕರ್ತವ್ಯವನ್ನು ನಿಭಾಯಿಸುತ್ತಾರೆ.<br>• ಕರ್ತವ್ಯ ನಿಷ್ಠೆಯನ್ನು ರೂಢಿಸಿಕೊಳ್ಳಬೇಕು. ಒಳ್ಳೆಯ ಗುಣಗಳು ನಮಗೆ ಕೀರ್ತಿಯನ್ನು ತರುತ್ತವೆ. ಪರೋಪಕಾರ ಮಾಡುವಾಗ ಯಾವುದೇ ಫಲವನ್ನು ಅಪೇಕ್ಷಿಸಬಾರದು ಎಂಬ ನೀತಿಯನ್ನು ತಿಳಿಯುವುದು. | • ಕಥೆಯ ಮೆಚ್ಚುಗೆಯಾದ ಭಾಗ ಓದುವುದು.<br>• ಚರ್ಚೆಯಲ್ಲಿ ಭಾಗವಹಿಸುವುದು, ಪ್ರಶ್ನೆಗಳಿಗೆ ಉತ್ತರಿಸುವುದು, ಟಿಪ್ಪಣಿ ತಯಾರಿಸುವುದು, ಸಂಭಾಷಣೆ ಬರೆಯುವುದು, ಅಭಿನಯಿಸುವುದು. | • ಜಾತಕ ಕತೆಗಳ ಸಂಗ್ರಹ | • ಟಿಪ್ಪಣಿ<br>• ಸಂಭಾಷಣೆ |

| ಪಾಠದ ಹೆಸರು | ಆಶಯ / ಉದ್ದೇಶ | ಪ್ರಕ್ರಿಯೆ | ಪೂರಕ ಸಾಮಗ್ರಿಗಳು | ಮೌಲ್ಯಮಾಪನ |
|---|---|---|---|---|
| ವಚನಗಳು | • ನಾವು ಒಗ್ಗಟ್ಟಿನಿಂದ, ಇತರರಿಗೆ ಸಹಾಯ ಮಾಡುವ ಮನೋಭಾವವನ್ನು ಬೆಳೆಸಿಕೊಳ್ಳುವುದು.<br>• ನಮ್ಮ ನಡೆ, ನುಡಿಗಳು ಉತ್ತಮವಾಗಿರಬೇಕು. 'ದಯೆಯೇ ಧರ್ಮದ ಮೂಲ' ಎಂಬ ಆಶಯವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವುದರೊಂದಿಗೆ ಸಕಲ ಜೀವಿಗಳಲ್ಲೂ ದಯೆಯನ್ನು ತೋರಬೇಕೆಂಬ ಮನೋಭಾವವನ್ನು ಬೆಳೆಸುವುದು.<br>• ಇಷ್ಟವಾದ ವಚನವನ್ನು ಗುರುತಿಸುವುದು. ಹೇಳುವುದು. | • ಪ್ರಾಸ ಪದ ಗುರುತಿಸಿ ಬರೆಯುವುದು, ಉತ್ತರ ಬರೆಯುವುದು, ವಿಂಗಡಿಸಿ ಬರೆಯುವುದು, ಹೋಲಿಸಿ ಬರೆಯುವುದು, ಅನುಭವ ಬರೆಯುವುದು, ವಿವಿಧ ವಚನಕಾರರ ವಚನಗಳನ್ನು ಸಂಗ್ರಹ ಮಾಡುವುದು.<br>• ಬಸವಣ್ಣನ ವಚನಗಳು<br>• ಹೋಲಿಕೆ | • ಅನುಭವ | |
| | | | | |

# ಈ ಮಣ್ಣು ನಮ್ಮದು

## ಚಟುವಟಿಕೆಗಳು

### ❑ ಟಿಪ್ಪಣಿ ತಯಾರಿಸಿರಿ

ನಮ್ಮ ದೇಶದ ವಿಶೇಷತೆಗಳನ್ನು ಪಟ್ಟಿಮಾಡಲು ಹೇಳುವುದು. ಬಳಿಕ ನಮ್ಮ ದೇಶದ ವಿಶೇಷತೆಗಳನ್ನೊಳಗೊಂಡ ವೀಡಿಯೋವನ್ನು ಮಕ್ಕಳಿಗೆ ತೋರಿಸುವುದು. ಅನಂತರ ಮಕ್ಕಳು 'ನನ್ನ ದೇಶದ ವಿಶೇಷತೆಗಳು' ಎಂಬುದರ ಕುರಿತು ಟಿಪ್ಪಣಿ ತಯಾರಿಸಲಿ.

### ❑ ಹಾಡಿರಿ

ನಮ್ಮ ದೇಶದ ಘನತೆಯನ್ನು, ವಿಶೇಷತೆಗಳನ್ನು ಕವಿತೆಗಳ ರೂಪದಲ್ಲಿ ಕವಿಗಳು ಹೇಗೆ ಬರೆದಿರಬಹುದು? ಮಕ್ಕಳಲ್ಲಿ 'ಈ ಮಣ್ಣು ನಮ್ಮದು' ಕವಿತೆಯನ್ನು ವೈಯಕ್ತಿಕವಾಗಿ ಓದಲು ಹೇಳುವುದು. ಬಳಿಕ ಮಕ್ಕಳು ಗುಂಪಿನಲ್ಲಿ ಕುಳಿತು ರಾಗ ಹಾಕಿ ಹಾಡಲಿ. ಯಾವ ಗುಂಪು ಉತ್ತಮವಾಗಿ ಹಾಡಿತು ಎಂಬುದನ್ನು ಮಕ್ಕಳೇ ಗುರುತಿಸಲಿ. ಉತ್ತಮ ಗಾಯನವನ್ನು ನಿರ್ಧರಿಸುವ ಸೂಚಕಗಳನ್ನು ಮಕ್ಕಳಿಂದ ಹೇಳಿಸಿ ಕರಿಹಲಗೆಯಲ್ಲಿ ದಾಖಲಿಸುವುದು ಇದರ ಆಧಾರದಲ್ಲಿ ಉತ್ತಮವಾಗಿ ಹಾಡಿದ ಗುಂಪನ್ನು ಕಂಡು ಹಿಡಿಯುವುದು.

ಬಳಿಕ ಈ ಕವಿತೆಯ ಧ್ವನಿ ಮುದ್ರಿಕೆಯನ್ನು ಆಲಿಸಲು ಅವಕಾಶ ಮಾಡಿಕೊಡುವುದು.

### ಉತ್ತಮ ಹಾಡುಗಾರಿಕೆ

- ರಾಗ, ತಾಳ ಲಯಗಳೊಂದಿಗೆ ಹಾಡಲಾಗಿದೆ
- ಉಚ್ಚಾರ ಸ್ಪಷ್ಟತೆಯೊಂದಿಗೆ ಹಾಡಲಾಗಿದೆ.
- ಗುಂಪಿನ ಎಲ್ಲರೂ ಹಾಡಿದ್ದಾರೆ.
- ಕವಿತೆಯ ಆಶಯ ವ್ಯಕ್ತವಾಗುವಂತೆ ದೇಶಭಕ್ತಿಯನ್ನು ಪ್ರೇರೇಪಿಸುವಂತೆ ಸ್ಫೂರ್ತಿದಾಯಕವಾಗಿ ಹಾಡಲಾಗಿದೆ.

### ❑ ಉತ್ತರಿಸಿರಿ

ಮಕ್ಕಳು ಪಾಠಪುಸ್ತಕದಲ್ಲಿ ಕವಿತೆಗೆ ಸಂಬಂಧಿಸಿ ನೀಡಿದ ಪ್ರಶ್ನೆಗಳಿಗೆ ವೈಯಕ್ತಿಕವಾಗಿ ಉತ್ತರ ಬರೆದು ಮಂಡಿಸಲಿ. ಇದರ ಕವಿತೆಯ ಆಶಯವನ್ನು ಮಗು ಎಷ್ಟರ ಮಟ್ಟಿಗೆ ಗ್ರಹಿಸಿದ್ದಾನೆ ಎಂಬುದನ್ನು ತಿಳಿಯುವುದು ಇದರ ಉದ್ದೇಶವಾಗಿದೆ.

### ❑ ಪ್ರಾಸಪದ ಬರೆಯಿರಿ

ಈ ಕವಿತೆಯಲ್ಲಿ ಬಂದಿರುವ ಅಂತ್ಯ ಪ್ರಾಸ ಪದವನ್ನು ಗುರುತಿಸಿ ಬರೆಯಲಿ. ಇದನ್ನು ಮನೆಕೆಲಸವಾಗಿಯೂ ಕೊಡಬಹುದು.

### ಅಂತ್ಯ ಪ್ರಾಸ ಎಂದರೇನು?

ಒಂದು ಕವಿತೆಯ ಸಾಲುಗಳ ಕೊನೆಯಲ್ಲಿ ಬರುವ ಪದಗಳ ಕೊನೆಯ ಅಕ್ಷರ ಪುನರಾವರ್ತನೆಗೊಳ್ಳುವುದನ್ನು ಅಂತ್ಯಪ್ರಾಸ ಎನ್ನುವರು.

ಇದು ಸಾಧಾರಣವಾಗಿ ಎರಡು, ಮೂರು ಅಥವಾ ನಾಲ್ಕು ಅಕ್ಷರಗಳಿಗೆ ಸಂಬಂಧಿಸಿ ಇರುತ್ತದೆ.

ಉದಾ: ಆಗರ – ಸಾಗರ

## ❑ ಘೋಷಣ ವಾಕ್ಯ ಬರೆಯಿರಿ.

ತಾಯ್ನಾಡಿನ ಹಿರಿಮೆಯನ್ನು ಸಾರುವ ಘೋಷಣ ವಾಕ್ಯಗಳನ್ನು ಮಕ್ಕಳು ವೈಯಕ್ತಿಕವಾಗಿ ರಚಿಸಿ ಮಂಡಿಸಲಿ. ಇದನ್ನು ಚಾರ್ಟುಪೇಪರಿನಲ್ಲಿ ಬರೆದು ಭಿತ್ತಿಗಳಿಗೆ ಅಂಟಿಸಬಹುದು ಯಾ ತೂಗಿ ಹಾಕಬಹುದು.

ಉದಾ:

ನಾವು ಬಾಳ್ವ ನಮ್ಮ ನೆಲವು; ಅದುವೆ ನಮಗೆ ಶ್ರೇಷ್ಠವು
ನಮ್ಮ ದೇಶ ನಮ್ಮ ಜನ; ನಮ್ಮ ಮಾನ ಪ್ರಾಣ ಘನ.

## ❑ ಚುಟುಕು ರಚಿಸಿರಿ

ತಾಯ್ನಾಡಿನ ಬಗ್ಗೆ ಮಕ್ಕಳು ಚುಟುಕುಗಳನ್ನು ರಚಿಸಲಿ. ಒಂದೆರಡು ಚುಟುಕುಗಳನ್ನು ಮಾದರಿಯಾಗಿ ಅಧ್ಯಾಪಕರು ಮಕ್ಕಳಿಗೆ ಒದಗಿಸುವುದು. ಇದನ್ನು ಮನೆಕೆಲಸವಾಗಿ ಕೊಡಬಹುದು.

1) ನಮ್ಮ ದೇಶ ಭಾರತ
ಹೇಳಿರೆಲ್ಲ ಹಿಗ್ಗುತ
ಸಿರಿ ಸೊಬಗನು ಸಾರುತ
ಪುಣ್ಯ ಭೂಮಿ ಭಾರತ

2) ನದಿ ವನ ಗಿರಿಗಳ ಬೀಡು
ರಾಜ ಋಷಿಗಳ ನಾಡು
ಭಾರತವ ನೀ ನೋಡು
ಹಿರಿಮೆಯ ಗೀತೆಯ ಹಾಡು

## ❑ ಸ್ವಾರಸ್ಯ ಬರೆಯಿರಿ

ಮಕ್ಕಳು ಕವಿತೆಯಲ್ಲಿರುವ ಸಾಲುಗಳ ಸ್ವಾರಸ್ಯ ಬರೆಯುವ ಮೊದಲು ಒಂದು ಸಾಲಿನ ಸ್ವಾರಸ್ಯವನ್ನು ಚರ್ಚಿಸಿ ತಿಳಿಯುವ ಅವಕಾಶವೊದಗಿಸಬೇಕು.

## ಸ್ವಾರಸ್ಯ ಹೀಗೂ ಇರಬಹುದಲ್ಲವೇ?

ಈ ಸಾಲನ್ನು ಕವಿ ಆರ್.ಎನ್. ಜಯಗೋಪಾಲ್ ರವರ 'ಈ ಮಣ್ಣು ನಮ್ಮದು' ಎಂಬ ಕವನದಿಂದ ಆರಿಸಲಾಗಿದೆ. ಇಲ್ಲಿ ಕವಿಗಳು ಭಾರತವನ್ನು ಸಾಗರಕ್ಕೆ ಹೋಲಿಸಿದ್ದಾರೆ. ಎಲ್ಲಾ ನದಿಗಳು ಸೇರಿ ಮಹಾ ಸಾಗರವಾಗುವಂತೆ ಭಾರತದಲ್ಲಿ ವಿವಿಧ ಮತ ಧರ್ಮಗಳು ಒಂದಾಗಿ ಬೆರೆತುಕೊಂಡಿವೆ. ಬೇರೆ ಬೇರೆ ನದಿಗಳ ನೀರಿನ ರುಚಿ ಬೇರೆಯಾದರೂ ಸಾಗರದ ನೀರಿನ ರುಚಿ ಒಂದೇ. ಹಾಗೆಯೇ ಭಾರತೀಯರು ಎಲ್ಲರೊಂದೇ ಸಮಾನ ಎಂದು ಕವಿ ಸಾರುತ್ತಾರೆ. ಇದು ಈ ಸಾಲಿನ ಸ್ವಾರಸ್ಯವಾಗಿದೆ.

## ❑ ಭಾಷಣ ತಯಾರಿಸಿರಿ

ಇದು ಈ ಪಾಠಭಾಗದ ಪ್ರಧಾನ ವ್ಯವಹಾರ ರೂಪವಾಗಿರುವುದರಿಂದ ಹೆಚ್ಚು ಗಮನ ಹರಿಸಬೇಕಾಗಿದೆ. ಪ್ರಾರಂಭದಲ್ಲಿ ಮಕ್ಕಳನ್ನು ಗುಂಪಿನಲ್ಲಿ ಕುಳ್ಳಿರಿಸಿ ನಮ್ಮ ದೇಶದ ಹಿರಿಮೆಯನ್ನು ಹೇಳುವ ಕೆಲವು ಲೇಖನಗಳನ್ನು ನೀಡುವುದು. ಮಕ್ಕಳು ಓದಿದ ಬಳಿಕ ವೈಯಕ್ತಿಕವಾಗಿ ಭಾಷಣವನ್ನು ಬರೆಯಲಿ. ಅನಂತರ ಕೆಲವು ಮಕ್ಕಳು ಮಂಡಿಸಲಿ. ಮಂಡಿಸಿದ ಭಾಷಣದ ಬಗ್ಗೆ ಚರ್ಚೆ ನಡೆಸಲಿ.

## ಭಾಷಣವು ಹೇಗಿರಬೇಕು?

- ಸಂಬೋಧನೆ
- ವಿಷಯ ಪ್ರವೇಶ
- ವಿಷಯ ವಿಸ್ತಾರ
- ವಿಷಯದ ಕ್ರಮೀಕರಣ
- ಉಪಸಂಹಾರ

ಮಕ್ಕಳು ಪುನಃ ಗುಂಪಿನಲ್ಲಿ ಕುಳಿತುಕೊಂಡು

ಚರ್ಚಿಸಿ, ಭಾಷಣವನ್ನು ಉತ್ತಮಪಡಿಸಲಿ. ಬಳಿಕ ಪ್ರತಿ ಗುಂಪಿನವರು ಮಂಡಿಸಲಿ. ಯಾವ ಗುಂಪಿನ ಭಾಷಣ ಉತ್ತಮವಾಗಿದೆ ಎಂಬುದನ್ನು ಸೂಚಕದ ಆಧಾರದಿಂದ ಕಂಡುಹಿಡಿಯಲಿ.

- ಭಾರತಾಂಬೆಯ ಹಿರಿಮೆ
- ಭಾಷಣದ ಸೂಚಕಗಳು
- ಪ್ರಾರಂಭ, ವಿಷಯ ವಿಸ್ತಾರ, ಮುಕ್ತಾಯ ಈ ರೀತಿಯಲ್ಲಿ ವಿಷಯವನ್ನು ಅನುಕ್ರಮವಾಗಿ ಬರೆಯಲಾಗಿದೆ.
- ಭಾರತದಲ್ಲಿ ಸರ್ವ ಕ್ಷೇತ್ರಗಳಲ್ಲೂ ಆದ ಅಭಿವೃದ್ಧಿಯನ್ನು, ಸಾಧನೆಗಳನ್ನು ಭಾಷಣದಲ್ಲಿ ಹೇಳಲಾಗಿದೆ.

  (ಸಾಹಿತ್ಯ, ವಿಜ್ಞಾನ, ಕೃಷಿ, ಇತ್ಯಾದಿ)
- ಭಾರತದ ಸೌಂದರ್ಯ, ಹಿರಿಮೆ ಇತ್ಯಾದಿಗಳನ್ನು ಹೇಳಲಾಗಿದೆ.
- ಆಶಯಗಳು ಸ್ಪಷ್ಟವೂ, ಸರಳವೂ ಆಗಿದ್ದು ಸ್ವಂತಿಕೆಯಿಂದ ಕೂಡಿದೆ. ಪದ ಪ್ರಯೋಗ ವಾಕ್ಯರಚನೆ, ಇತ್ಯಾದಿಗಳಿಂದ ಭಾಷೆಯ ಶೈಲಿ ಉತ್ತಮವಾಗಿದೆ.

ಬಳಿಕ ಅಧ್ಯಾಪಕರು ತಾವು ಬರೆದ ಭಾಷಣವನ್ನು ಮಂಡಿಸುವುದು. ಅಧ್ಯಾಪಕರ ಭಾಷಣವನ್ನು ಕೇಳಿ ಮಕ್ಕಳು ತಮ್ಮ ಭಾಷಣವನ್ನು ಉತ್ತಮಪಡಿಸಲಿ.

**ಭಾಷಣ ಹೀಗೂ ಆಗಬಹುದಲ್ಲವೇ?**

## ಭಾರತಾಂಬೆಯ ಹಿರಿಮೆ

ಆದರಣೀಯ ಗುರು ಹಿರಿಯರೇ, ಪ್ರೀತಿಯ ಸಹಪಾಠಿಗಳೇ, ನಿಮಗೆಲ್ಲರಿಗೂ ನನ್ನ ವಂದನೆಗಳು. ನಾವೆಲ್ಲರೂ ಬಹಳ ಸಂಭ್ರಮದಿಂದ ಸ್ವಾತಂತ್ರ್ಯ ದಿನವನ್ನು ಆಚರಿಸುತ್ತಿದ್ದೇವೆ. ಭಾರತಾಂಬೆಯ ಮಕ್ಕಳಾದ ನಾವು ಎಲ್ಲರೂ ಸುಖ ಸಂತೋಷಗಳಿಂದ ಬಾಳುತ್ತಿದ್ದೇವೆ. ಇದಕ್ಕೆ ಕಾರಣ, ನಮ್ಮ ಹಿರಿಯರ ಸಾಧನೆ. ಅವರ ಕರ್ತವ್ಯ ಪರತೆ, ಸತ್ಯಸಂಧತೆ ಹಾಗೂ ಪ್ರಾಮಾಣಿಕತೆಯಿಂದಾಗಿ ನಾವಿಂದು ಸಂತೋಷದಿಂದಿದ್ದೇವೆ.

ನಮ್ಮ ದೇಶವು ಪ್ರಾಕೃತಿಕವಾಗಿ ಬಹಳ ಸುಂದರವೂ ವಿಭಿನ್ನವೂ ಎಲ್ಲಾ ರೀತಿಯ ಹವಾಗುಣಗಳೂ ಇರುವ ಉಪ ದ್ವೀಪವಾಗಿದೆ. ಉತ್ತರದಲ್ಲಿ ಹಿಮಾಲಯವು ನಮ್ಮ ರಕ್ಷಣೆಗಿರುವ ತಡೆಗೋಡೆಯಾಗಿದೆ. ಮಾತ್ರವಲ್ಲ ಅದು ದಕ್ಷಿಣ ಭಾಗದಿಂದ ಬೀಸುವ ತೇವಭರಿತ ಗಾಳಿಯನ್ನು ತಡೆದು ದೇಶದೆಲ್ಲೆಡೆ ಮಳೆ ಸುರಿಯುವಂತೆ ಮಾಡುತ್ತದೆ. ಉಳಿದ ಮೂರುದಿಕ್ಕುಗಳಲ್ಲಿ ಸಮುದ್ರವು ಆವೃತವಾಗಿದ್ದು ಶತ್ರುಗಳ ದಾಳಿಯ ಭಯವಿರುವುದಿಲ್ಲ. ಭಾರತದಲ್ಲಿ ಇರುವ ಹಿಮಾಲಯ, ವಿಂಧ್ಯ, ಸಹ್ಯಾದ್ರಿ ... ಗಿರಿಕಂದರಗಳು, ವನರಾಶಿಯನ್ನು ಬೆಳೆಸಿ ಪೋಷಿಸಿವೆ. ಇಲ್ಲಿ ಹುಟ್ಟಿ ಹರಿಯುವ ಗಂಗಾ, ಯಮುನಾ, ಕೃಷ್ಣಾ, ಕಾವೇರಿ, ಗೋದಾವರಿ, ಬ್ರಹ್ಮಪುತ್ರ ಮೊದಲಾದ ನದಿಗಳು ನಮ್ಮ ನಾಡನ್ನು ಸಂಪದ್ಭರಿತವಾಗಿ ಮಾಡಿವೆ. ಇವುಗಳಿಂದಾಗಿ ನಾವು ಆಹಾರ ಕ್ಷೇತ್ರದಲ್ಲಿ ಸ್ವಾವಲಂಬನೆಯನ್ನು ಹೊಂದಿದ್ದೇವೆ. ನಮ್ಮ ದೇಶವು ಆಲ, ಅಶ್ವತ್ಥ, ದೇವದಾರ, ಸಾಗುವಾನಿ, ಶ್ರೀಗಂಧ ಮುಂತಾದ ವೃಕ್ಷ ಸಮೂಹಗಳಿಂದ

ಶೋಭಾಯಮಾನವಾಗಿದೆ. ಕೇದಗೆ, ಮಲ್ಲಿಗೆ, ಸಂಪಿಗೆ, ಸುರಗಿ, ಪಾರಿಜಾತ ಮೊದಲಾದ ಹೂಗಳ ಕಂಪಿನಿಂದ ಸುಗಂಧಮಯವಾಗಿದೆ. ಹಲಸು, ಮಾವು, ನೇರಳೆ ಇತ್ಯಾದಿ ಫಲಗಳನ್ನು ಸವಿದು ಇಲ್ಲಿನ ಪ್ರಾಣಿ ಸಂಕುಲಗಳು ನಲಿಯುತ್ತಿವೆ.

ನಾವು ಆರ್ಥಿಕವಾಗಿಯೂ, ಸಾಂಸ್ಕೃತಿಕವಾಗಿಯೂ, ಸಾಮಾಜಿಕವಾಗಿಯೂ ಮುಂದುವರಿದಿದ್ದೇವೆ. ವಿಶ್ವಕ್ಕೆ ರಾಮಾಯಣ, ಮಹಾಭಾರತ ಎಂಬ ಮಹಾಕಾವ್ಯಗಳನ್ನು ನೀಡಿದ ದೇಶ ನಮ್ಮದು. ಕಾಳಿದಾಸ, ಬಾಣ, ಭಾಸ, ಭಾರವಿ, ಪಂಪ, ರವೀಂದ್ರನಾಥ ಠಾಗೋರ್ ಮೊದಲಾದ ಕವಿಶ್ರೇಷ್ಠರು ನಮ್ಮ ಸಾಹಿತ್ಯಪರಂಪರೆಯನ್ನು ಶ್ರೀಮಂತಗೊಳಿಸಿದ್ದಾರೆ. ಆರ್ಯಭಟ, ಶುಶ್ರುತ, ಭಾಸ್ಕರಾಚಾರ್ಯ, ರಾಮಾನುಜನ್, ಸಿ.ವಿ. ರಾಮನ್ ಮೊದಲಾದ ವಿಜ್ಞಾನಿಗಳು ನೀಡಿದ ಕೊಡುಗೆ ಅಪಾರವಾದುದು. ವಿದೇಶಿಯರಿಗೂ ವಿದ್ಯಾಭ್ಯಾಸ ನೀಡಿದ ಪ್ರಾಚೀನ ವಿಶ್ವ ವಿದ್ಯಾನಿಲಯಗಳಾದ ನಲಂದ ಮತ್ತು ತಕ್ಷಶಿಲ ನಮ್ಮ ಹೆಮ್ಮೆಯ ಶಿಕ್ಷಣ ಕೇಂದ್ರಗಳಾಗಿದ್ದುವು. ಇಂದು ಹಲವಾರು ವಿಶ್ವವಿದ್ಯಾನಿಲಯುಗಳು ಕಾರ್ಯಾಚರಿಸುತ್ತಿವೆ. ಉನ್ನತ ವಿದ್ಯಾಭ್ಯಾಸ ಪಡೆದು ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಪ್ರತಿಭಾವಂತರು ನಮ್ಮಲ್ಲಿದ್ದಾರೆ. ಇದಕ್ಕೆ ನಮ್ಮ ರಾಷ್ಟ್ರಪತಿಯಾಗಿದ್ದ ಶ್ರೀ ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಸಾಕ್ಷಿಯಾಗಿದ್ದಾರೆ. ಇದೇ ರೀತಿ ನಮ್ಮದು ಉತ್ತಮ ಕಲಾ ಪರಂಪರೆ ಹೊಂದಿದ ದೇಶವಾಗಿದೆ. ಭರತನಾಟ್ಯ, ಯಕ್ಷಗಾನ, ಒಡಿಸ್ಸಿ ಮೊದಲಾದ ಕಲೆಗಳನ್ನು ಸೃಷ್ಟಿಸಿ ಬೆಳೆಸಿದ ದೇಶ ನಮ್ಮದು. ನಮ್ಮ ಜನಪದರು ವೈವಿಧ್ಯಪೂರ್ಣವಾದ ಕಲೆಗಳ ಉಪಾಸಕರಾಗಿದ್ದಾರೆ. ಹೀಗೆ ನವ್ಯ ದಿವ್ಯ ಭಾರತವು ಸರ್ವಕ್ಷೇತ್ರಗಳಲ್ಲಿ ಮುನ್ನಡೆಯನ್ನು ಸಾಧಿಸುತ್ತಿರುವ ಪ್ರಪಂಚದಲ್ಲಿ ಮುಂದುವರಿಯುತ್ತಿರುವ ರಾಷ್ಟ್ರವಾಗಿದೆ. ಕೃಷಿ, ವಿಜ್ಞಾನ ತಾಂತ್ರಿಕತೆಯಲ್ಲಿ ಅಮೇರಿಕ, ಜಪಾನ್ ಮುಂತಾದ ರಾಷ್ಟ್ರಗಳ ಸಾಲಿನಲ್ಲಿ ಭಾರತವು ನಿಂತಿದೆ. ನಾವು ಅವರಂತೆಯೇ ಅನ್ಯಗ್ರಹಗಳ ಸಂಶೋಧನೆಯಲ್ಲಿ ತೊಡಗಿದ್ದೇವೆ. ಭೂಮಿಯ ಗರ್ಭದಲ್ಲಿರುವುದನ್ನು ಹುಡುಕಿ ತೆಗೆಯುತ್ತಿದ್ದೇವೆ. ದೇಶವನ್ನು ರಕ್ಷಿಸುವಲ್ಲಿ ಸಮರ್ಥವಾದ ಯುದ್ಧಾಸ್ತ್ರಗಳೂ ಕ್ಷಿಪಣಿಗಳೂ ಹಡಗುಗಳೂ ಜಲಾಂತರ್ಗಾಮಿಗಳೂ ನಮ್ಮಲ್ಲಿವೆ. ಇಷ್ಟು ಮಾತ್ರವಲ್ಲ, ಭೂಮಿಯಲ್ಲಿ ಜನರಿಂದಲೇ ಆಳಲ್ಪಡುವ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶವಾಗಿ ಭಾರತವು ಕಂಗೊಳಿಸುತ್ತಿದೆ. ವಿವಿಧ ಮತ, ಪಂಥ ಭಾಷೆಗಳನ್ನು ಹೊಂದಿರುವ ದೇಶ ನಮ್ಮದು . ನಮ್ಮ ದೇಶದ ವೈವಿಧ್ಯಮಯವಾದ ಪರಂಪರೆ ಹಾಗೂ ಸಮೃದ್ಧಿಗಾಗಿ ಹೆಮ್ಮೆ ಪಡಬೇಕು. ನಮ್ಮ ಕರ್ತವ್ಯವನ್ನು ದೇಶದ ಏಳ್ಗೆಗಾಗಿ ನಿರ್ವಹಿಸಬೇಕು. ಹಾಗಾದರೆ ಮಾತ್ರ, ಭಾರತವು ವಿಶ್ವದ ಅಗ್ರಗಣ್ಯ ರಾಷ್ಟ್ರವಾಗುವುದರಲ್ಲಿ ಸಂದೇಹವಿಲ್ಲ. ಎಂದು ಹೇಳುತ್ತಾ ನಿಮಗೆಲ್ಲರಿಗೂ ಇನ್ನೊಮ್ಮೆ ವಂದಿಸುತ್ತಾ, ನನ್ನ ಭಾಷಣವನ್ನು ಕೊನೆಗೊಳಿಸುತ್ತೇನೆ.

– ಜೈ ಹಿಂದ್ –

ಮಕ್ಕಳು ಗುಂಪಿನಲ್ಲಿ ತಯಾರಿಸಿದ ಉತ್ತಮ ಭಾಷಣವನ್ನು ಚಾರ್ಟಿನಲ್ಲಿ ಬರೆದು ತೂಗು ಹಾಕಲಿ. ಬಳಿಕ ಅಧ್ಯಾಪಕರ ಸಹಾಯದಿಂದ ಅವುಗಳಲ್ಲಿರುವ ತಪ್ಪುಗಳನ್ನು ಸರಿಪಡಿಸಲಿ.

**ಮಕ್ಕಳು ಯಾವೆಲ್ಲ ರೀತಿಯ ತಪ್ಪುಗಳನ್ನು ಮಾಡುವರು?**

- ಅಕ್ಷರ ದೋಷ
- ಪದ ಬಳಕೆಯ ದೋಷ

- ಚಿಹ್ನೆಗಳ ಬಳಕೆಯ ದೋಷ
- ಭಾಷಾ ಪ್ರಯೋಗದ ದೋಷ (ವ್ಯಾಕರಣಕ್ಕೆ ಸಂಬಂಧಿಸಿ)
- ಆಶಯ ದೋಷ.

**ಪೂರಕ ಓದಿಗೆ**

## ನಮೋ ನಮೋ ನವ ಭಾರತ

ನಮೋ ನಮೋ ನವ ಭಾರತ ನಾಯಕಿ;
ನಮೋ ನಮೋ ಸೌಭಾಗ್ಯ ಪ್ರದಾಯಕಿ.
ಸಹ್ಯ ಹಿಮಾಚಲ ವಿಂಧ್ಯ ಅರಾವಳಿ
ಪಾಳಯ ರಚಿಸಿವೆ ಸುತ್ತ ಕರಾವಳಿ
ನದಿ ನದ ಸರಸ್ಸು ಸಿರಿ ಬಿರುದಾವಳಿ
ನಮೋ ನಮೋ ನವ ಭಾರತ.....

ಋಷಿ ಮುನಿ ಹೊತ್ತರು ನಿನ್ನಯ ಮೇನೆ
ಸ್ವರಾಜ್ಯರೆದೆಯಲಿ ವಿರಾಜ ಮಾನೆ
ನಿನ್ನ ಯಶಸ್ಸಿಗೆ ಗಡಿ ಗೆರೆ ಬಾನೆ!
ನಮೋ ನಮೋ ನವ ಭಾರತ. . .

ಬೀಸಿರೆ ತೆಂಗಿನ ತಾಳೆಯ ಚವರಿ
ಚಂದನ ಕತ್ತುರಿ ದೇಹಕೆ ಸವರಿ
ರಮಿಸಿಹೆ ಭೂಮಿಯ ಚೊಚ್ಚಲು ಕುವರಿ.
ನಮೋ ನಮೋ ನವ ಭಾರತ. . .

ಋಷಿ ಸಂತರ ಯೋಗಿ ಮಹಂತರ
ಮಹಿಮಾ ಸ್ರೋತದಿ ಮಿಂದು ನಿರಂತರ
ಶುಚಿಯಾಗಿಹೆ ನೀನತಿ ಬಹಿರಂತರ
ನಮೋ ನಮೋ ನವ ಭಾರತ....

ನಾನಾ ಮತ ಬಹು ಭಾಷಾ ಮಾಲಿನಿ
ವಿವಿಧ ಸುಸಂಸ್ಕೃತಿ ಸುಗಂಧ ಶಾಲಿನಿ
ಪ್ರಗತಿಯ ಜೊತೆ ಪರ ಗತಿ ಪರಿಪಾಲಿಸಿ
ನಮೋ ನಮೋ ನವ ಭಾರತ .....

**– ಕೆ.ಎಸ್. ನಿಸಾರ್ ಅಹ್ಮದ್**

## ಭಾರತಾಂಬೆಯ ಮಹಿಮೆ

ಭಾರತವನುಳಿಯುತ್ತ ನನಗೆ ಜೀವನವೆತ್ತ?
ಭಾರತವೆ ನನ್ನುಸಿರು  ನನ್ನೊಗೆದ ಬಸಿರು;
ಭಾರತವೆ ಧನಧಾನ್ಯ, ಭಾರತವೆ ಮನೆಮಾನ್ಯ,
ಭಾರತವೆ ದೇವಾರವೆನ್ನ ಸಂಸಾರ
ಭಾರತದ ನೆಲಹೊಲವು ಸುರಭಿಯಿಳಿಕೆಚ್ಚಲವು,
ಭಾರತದ ತಿಳಿಜಲವು ಸೊದೆಯ ಸವಿಸೆಳವು;
ಭಾರತದ ಶ್ಯಾಮಲತೆ ತನುಮನಕೆ ಕಾಮಲತೆ,
ಭಾರತದ ಪಶುಪಕ್ಷಿ ವೈಚಿತ್ರ್ಯ ಸಾಕ್ಷಿ,
ಭಾರತದ ಸಕ್ಕದವು ಜ್ಞಾನನಿಧಿಯೊಕ್ಕದವು,
ಭಾರತದ ಪಲ ಮಾತೆ ಮೇಳವದ ಗೀತೆ,
ಭಾರತದ ಶುಭಚರಿತ ಧರೆಗೆ ಧರ್ಮದ ಕರೆತ,

ಭಾರತದ ತೋಳ್ಕಿಗಿಲು ಹಗೆಯ ಬಗೆದಿಗಿಲು
ಭಾರತೀಯ ಸ್ವತಂತ್ರ ಸಾಧನವೆ ನಿಜ ಮಂತ್ರ,
ಭಾರತದ ಜಯಮೂರ್ತಿ ಮನ್ಮನಃ ಪೂರ್ತಿ,
ಭಾರತದ ಸೋದರಿಕೆ ನನ್ನ ದಿನದಿನದೆರಕೆ,
ಭಾರತ ಯಶೋಗಾನವೆನ್ನೆದೆಯ ತಾನ

ಭಾರತದ ಮಂಗಲವು ಭುವನವಲ್ಲಭನೊಲವು,
ಭಾರತ – ಸಮುಚ್ಚಯವು ಶಾಂತಿಗಾಶ್ರಯವು;
ಭಾರತದ ಜನಕುಲವು ಭುವಿಯ ಬಳಗಕೆ ಬಲವು;
ಭಾರತಾಂಬೆಯ ಭಕ್ತಿ ನನಗಾತ್ಮಶಕ್ತಿ

**– ಮಂಜೇಶ್ವರ ಗೋವಿಂದ ಪೈ**

# ವಿಶಾಲ ಹೃದಯಿ ಕಪಿ

**ಚಟುವಟಿಕೆಗಳು**

- **ಕಥೆ ಹೇಳುವ**

ಮಕ್ಕಳು ಪ್ರಾಣಿಗಳಿಗೆ ಸಂಬಂಧಿಸಿರುವ ಹಲವಾರು ನೀತಿ ಕತೆಗಳನ್ನು ಓದಿ ಕೇಳಿ ತಿಳಿದಿರಬಹುದು. ಕೆಲವು ಮಕ್ಕಳು ತಾವು ಕೇಳಿ ತಿಳಿದ ಕಥೆಯನ್ನು ತರಗತಿಯಲ್ಲಿ ಮಂಡಿಸಲಿ.

ನಿಮ್ಮ ಪಠ್ಯಪುಸ್ತಕದಲ್ಲಿ ಇಂತಹ ಒಂದು ರಸವತ್ತಾದ ಕತೆ ಇದೆ. ಅದನ್ನು ಓದಿ ತಿಳಿಯಿರಿ ಎನ್ನುತ್ತಾ ಪಾಠ ಭಾಗದತ್ತ ಒಯ್ಯಬಹುದಲ್ಲವೇ?

- **ಅಭಿಪ್ರಾಯ ತಿಳಿಸಿರಿ**

ಕತೆ ಓದಿದ ಬಳಿಕ ಮಕ್ಕಳು ತಮ್ಮ ಅಭಿಪ್ರಾಯಗಳನ್ನು ಮೌಖಿಕವಾಗಿ ಮಂಡಿಸಲಿ.

– ಕತೆ ಇಷ್ಟವಾಯಿತೇ?
– ಯಾಕೆ ಇಷ್ಟವಾಯಿತು?
– ಇದರಲ್ಲಿ ಬರುವ ಕಥಾ ಪಾತ್ರಗಳು ಯಾವುವು?
– ನೀವು ಇಷ್ಟಪಡುವ ಕಥಾ ಪಾತ್ರ ಯಾವುದು? ಯಾಕೆ?
– ಇಲ್ಲಿರುವ ನೀತಿ ಯಾವುದು?

ಇತ್ಯಾದಿ ಪ್ರಶ್ನೆಗಳ ಮೂಲಕ ಅಭಿಪ್ರಾಯಗಳನ್ನು ತಿಳಿಯಲು ಪ್ರಯತ್ನಿಸಬೇಕು.

- **ಓದಿರಿ**

ಮಕ್ಕಳು ತಮಗೆ ಮೆಚ್ಚುಗೆಯಾದ ಭಾಗವನ್ನು ಉಚ್ಚಾರ ಮತ್ತು ಆಶಯ ಸ್ಪಷ್ಟತೆಯೊಂದಿಗೆ ಓದಿ ಮಂಡಿಸಲಿ. ಬಳಿಕ ಅಧ್ಯಾಪಕರು ಸ್ವರಭಾರದೊಂದಿಗೂ ಆಶಯ ಸ್ಪಷ್ಟತೆಯೊಂದಿಗೂ ಭಾವಪೂರ್ಣವಾಗಿಯೂ ಕತೆಯನ್ನು ಓದುವುದು. ಕತೆ ಓದುವ ಶೈಲಿಯನ್ನು ಮಕ್ಕಳು ಗುರುತಿಸಲಿ.

- ಮಕ್ಕಳಿಗೆ ಕತೆಯ ನೀತಿಯನ್ನು ಸ್ಪಷ್ಟಪಡಿಸುವುದು, ಅವರಲ್ಲಿ ಉತ್ತಮ ಮನೋಭಾವಗಳನ್ನು ಮೂಡಿಸುವುದು ಹಾಗೂ ಜೀವನ ಮೌಲ್ಯಗಳನ್ನು ಬೆಳೆಸುವುದು ಚರ್ಚೆಯ ಉದ್ದೇಶವಾಗಿರಬೇಕು. ಅದಕ್ಕಾಗಿ ಅಂತಹ ಪ್ರಶ್ನೆಗಳನ್ನು ಮಕ್ಕಳ ಮುಂದಿಡಬೇಕು ಪಾಠ ಪುಸ್ತಕದಲ್ಲಿ ಇಂತಹ ಒಂದು ಪ್ರಶ್ನೆಯನ್ನು ಕೊಡಲಾಗಿದೆ. ಇದೇ ರೀತಿಯ ಬೇರೆ ಯಾವ ಯಾವ ಪ್ರಶ್ನೆಗಳನ್ನು ಕೇಳಬಹುದು?

- 'ಮರವನ್ನು ಸುತ್ತುವರಿದು ಎಲ್ಲಾ ಕಪಿಗಳನ್ನು ಕೊಂದು ಕೆಡವಿ ಹಾಕಿ' ಎಂಬ ರಾಜನ ಆಜ್ಞೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು?

## ❑ ಉತ್ತರಿಸಿರಿ

ಚರ್ಚೆಯ ಬಳಿಕ ಮಕ್ಕಳು ಪಾಠಭಾಗಕ್ಕೆ ಸಂಬಂಧಿಸಿ ನೀಡಲಾದ ಆಶಯಗ್ರಹಣ ಪ್ರಶ್ನೆಗಳಿಗೆ ವೈಯಕ್ತಿಕವಾಗಿ ಉತ್ತರವನ್ನು ಬರೆದು ಮಂಡಿಸಲಿ.

## ❑ ಟಿಪ್ಪಣಿ ತಯಾರಿಸಿರಿ

ಟಿಪ್ಪಣಿ ತಯಾರಿಸುವ ಮೊದಲು ಮಕ್ಕಳೊಂಡನೆ ಚರ್ಚಿಸುವುದು ಒಳ್ಳೆಯದು. ಇದಕ್ಕಾಗಿ ಯಾವೆಲ್ಲ ಪ್ರಶ್ನೆಗಳನ್ನು ಕೇಳಬಹುದು?

- ಈ ಕಥೆಯ ಕಥಾ ನಾಯಕ ಯಾರು?
- ಅವನನ್ನು ಕಥಾ ನಾಯಕನೆಂದು ಹೇಳಲು ಕಾರಣವೇನು?
- ಅವನಲ್ಲಿರುವ ಉತ್ತಮ ಗುಣಗಳಾವುವು?
- ಹಾಗಾದರೆ ಉತ್ತಮ ನಾಯಕನಲ್ಲಿರುಬೇಕಾದ ಗುಣಗಳೇನು?

ಮಕ್ಕಳು ವೈಯಕ್ತಿಕವಾಗಿ ಟಿಪ್ಪಣಿ ತಯಾರಿಸಲಿ. ಕೆಲವರು ಮಂಡಿಸಲಿ. ಬಳಿಕ ಅಧ್ಯಾಪಕರು ರಚಿಸಿದ ಟಿಪ್ಪಣಿಯನ್ನು ಮಂಡಿಸುವುದು. ಇದನ್ನು ಆಧಾರವಾಗಿಟ್ಟುಕೊಂಡು ಮಕ್ಕಳು ತಮ್ಮ ಟಿಪ್ಪಣಿಯನ್ನು ಗುಂಪಿನಲ್ಲಿ ಕುಳಿತು ಉತ್ತಮಪಡಿಸಿ ಬರೆಯಲಿ.

## ಟಿಪ್ಪಣಿ ಹೀಗೂ ಆಗಬಹುದಲ್ಲವೇ?

ವಿಶಾಲ ಹೃದಯಿ ಕಪಿ ಕತೆಯ ನಾಯಕನಾದ ಕಪಿ ಅರಸು ಒಬ್ಬ ಉತ್ತಮ ನಾಯಕನೆನ್ನುವುದರಲ್ಲಿ ಎರಡು ಮಾತಿಲ್ಲ. ವಿಭಿನ್ನ ಸ್ವಭಾವಗಳನ್ನೊಳಗೊಂಡ ತನ್ನ ಗುಂಪಿನ ಸದಸ್ಯರನ್ನು ಬಹಳ ಚಾಕಚಕ್ಯತೆಯಿಂದ ನಿಭಾಯಿಸುವ ತಂತ್ರಗಾರಿಕೆ ನಾಯಕನಲ್ಲಿರಬೇಕು. ನಾಯಕನಾದವನು ಕಷ್ಟಗಳು ಬಂದಾಗ ಎದೆಗುಂದದೆ ಅವುಗಳನ್ನು ಎದುರಿಸುವ ಸಾಮರ್ಥ್ಯವನ್ನು ಹೊಂದಿರಬೇಕು. ಬಳಗವನ್ನು ರಕ್ಷಿಸುವ ಸಂದರ್ಭದಲ್ಲಿ ಕಪಿ ಅರಸು ತನ್ನ ವೈರಿಯೆನಿಸಿದ ದೇವದತ್ತ ಕಪಿಯನ್ನು ಕೂಡಾ ರಕ್ಷಿಸುತ್ತಾನೆ. ರಾಜನಾದವನು ತನ್ನ ಪ್ರಜೆಯನ್ನು ರಕ್ಷಿಸಬೇಕು. ಶ್ರೇಷ್ಠನಾಯಕನು ಪ್ರಜೆಗಳನ್ನು ತನ್ನ ಮಕ್ಕಳಂತೆ ನೋಡಿಕೊಳ್ಳಬೇಕು. ಅವರಲ್ಲಿ ಭೇದವೆಣಿಸಬಾರದು. ಅವರ ಸುಖವೇ ಮುಖ್ಯ ಹೊರತು ತನ್ನದಲ್ಲ ಎಂದು ಅರಿತಿರಬೇಕು. ರಾಜಾ ಬ್ರಹ್ಮದತ್ತನ ಮನಸ್ಸನ್ನು ಪರಿವರ್ತಿಸಿದ ಕಪಿ ನಾಯಕನ ತ್ಯಾಗ, ದುಷ್ಟರನ್ನು ಒಳ್ಳೆಯವರನ್ನಾಗಿಸುವ ಗುಣ, ಒಬ್ಬ ನಾಯಕ ನಲ್ಲಿರಬೇಕೆಂಬುದನ್ನು ಸೂಚಿಸುತ್ತದೆ.

## ❑ ಅಭಿನಯಿಸಿರಿ

ಮಕ್ಕಳು ತಮಗೆ ಇಷ್ಟವಾದ ಕಥಾಭಾಗವನ್ನು ಆಯ್ದುಕೊಂಡು ಕಥಾ ಪಾತ್ರಗಳಿಗೆ ಸಂಭಾಷಣೆಯನ್ನು ರಚಿಸಲಿ.

ಉದಾ:

– ರಾಜನಿಗೆ ಮಾವಿನ ಹಣ್ಣು ಸಿಕ್ಕಿದ ಸಂದರ್ಭ.

– ರಾಜನಿಗೆ ನಿದ್ರಾಭಂಗವಾದ ಸಂದರ್ಭ.

ಆ ಮೇಲೆ ಅಧ್ಯಾಪಕರು ಕೈಪಿಡಿಯಲ್ಲಿ ನೀಡಿದ ಅಥವಾ ತಾನೇ ತಯಾರಿಸಿದ ಸಂಭಾಷಣೆಯನ್ನು ಓದಿ

ಮಂಡಿಸುವುದು. ಬಳಿಕ ಮಕ್ಕಳು ಗುಂಪಿನಲ್ಲಿ ಕುಳಿತು ತಮ್ಮ ರಚನೆಯನ್ನು ಉತ್ತಮಪಡಿಸಲಿ. ಅನಂತರ ಮಕ್ಕಳು ಒಬ್ಬೊಬ್ಬರಾಗಿ ಬಂದು ಏಕಪಾತ್ರಾಭಿನಯ ಮಾಡಲಿ. ಅವರ ಅಭಿನಯವನ್ನು ಇತರರು ಮೌಲ್ಯನಿರ್ಣಯ ನಡೆಸಿ ಉತ್ತಮವಾಗಿ ಅಭಿನಯಿಸಿದವನನ್ನು ಅಭಿನಂದಿಸಲಿ.

ಮೌಲ್ಯಮಾಪನ ನಡೆಸುವ ಮೊದಲು ಮೌಲ್ಯಮಾಪನ ಸೂಚಕಗಳ ಬಗ್ಗೆ ಚರ್ಚೆ ನಡೆದು ಸೂಚಕಗಳನ್ನು ನಿರ್ಧರಿಸಬೇಕು.

ಉತ್ತಮ ಏಕಪಾತ್ರಾಭಿನಯ ಹೇಗಿರಬೇಕು?

- ಭಾವಯುತವಾದ ಆಂಗಿಕ ಚಲನೆ ಇರಬೇಕು.
- ಉಚ್ಚಾರ ಸ್ಪಷ್ಟತೆಯೊಂದಿಗೆ, ಭಾವಪೂರ್ಣವಾದ ಸಂಭಾಷಣೆ ಇರಬೇಕು.
- ಸಂಭಾಷಣೆಯು ಪಾತ್ರಕ್ಕೆ ತಕ್ಕುದಾಗಿರಬೇಕು.
- ಘಟನೆಯ ಪೂರ್ಣ ಆಶಯವನ್ನು ಸ್ಪಷ್ಟಪಡಿಸುವಂತಿರಬೇಕು.

**ಸಂಭಾಷಣೆ ಹೀಗೂ ಆಗಬಹುದಲ್ಲವೇ?**

(ವಾರಣಾಸಿಯ ದೊರೆ ಬ್ರಹ್ಮದತ್ತ ಗಂಗಾನದಿಯಲ್ಲಿ ಸ್ನಾನಕ್ಕೆ ಹೋದ ಸಂದರ್ಭದಲ್ಲಿ ಬೆಸ್ತನು ತನಗೆ ದೊರೆತ ಹಣ್ಣನ್ನು ಬ್ರಹ್ಮದತ್ತನಿಗೆ ತಂದು ಕೊಡುತ್ತಾನೆ)

ಬ್ರಹ್ಮದತ್ತ : ಆಹಾ! ಎಷ್ಟು ಸುಂದರವಾಗಿದೆ! ಇದೆಂತಹ ವಿಚಿತ್ರ ಹಣ್ಣು!

ಬೆಸ್ತ : ಹೌದು ಮಹಾಪ್ರಭು! ನನಗಂತೂ ಇದರ ಪರಿಚಯವೇ ಇಲ್ಲ.

ಬ್ರಹ್ಮದತ್ತ : ಅದಿರಲಿ ಇದು ನಿನಗೆಲ್ಲಿ ದೊರೆಯಿತು?

ಬೆಸ್ತ : ಮೀನು ಹಿಡಿಯಲೆಂದು ಬೀಸಿದ ಬಲೆಯಲ್ಲಿ ಸಿಲುಕಿಕೊಂಡಿತ್ತು ಸ್ವಾಮಿ!

ಬ್ರಹ್ಮದತ್ತ : ಪರಮಾಶ್ಚರ್ಯ! ನದೀ ನೀರಿನಲ್ಲೂ ಹಣ್ಣುಗಳೇ?

ಬೆಸ್ತ : ನನಗೇನೂ ತಿಳಿಯದು ಬಹುಶಃ ಹಿಮಾಲಯದ ತಪ್ಪಲಿನಲ್ಲಿ ಬೆಳೆದ ಈ ಹಣ್ಣು ನದೀ ನೀರಿಗೆ ಬಿದ್ದು ತೇಲಿಕೊಂಡು ಬಂದಿರಬಹುದು.

ಬ್ರಹ್ಮದತ್ತ : ಓಹೋ ಹಾಗೇನು ವಿಚಾರ! ಈ ಹಣ್ಣಿನ ಬಗ್ಗೆ ಹೆಚ್ಚಿನ ವಿಚಾರ ತಿಳಿದವರು ಯಾರಾದರೂ ಇರಬಹುದೇ?

ಬೆಸ್ತ : ನಮ್ಮ ವನಪಾಲಕನಿಗೆ ಇದರ ಬಗ್ಗೆ ಖಂಡಿತವಾಗಿಯೂ ಮಾಹಿತಿ ಇರಬಹುದು ಒಡೆಯಾ?

ಬ್ರಹ್ಮದತ್ತ : ಯಾರಲ್ಲಿ? ವನಪಾಲಕನನ್ನು ಕರೆಸಿ.

ವನಪಾಲಕ : ಬ್ರಹ್ಮದತ್ತ ಮಹಾರಾಜರಿಗೆ ಪ್ರಣಾಮಗಳು. ಕರೆಸಿದಂತಹ ಕಾರಣವೇನು ಮಹಾಪ್ರಭು?

ಬ್ರಹ್ಮದತ್ತ : (ಹಣ್ಣನ್ನು ತೋರಿಸಿ) ಈ ಹಣ್ಣಿನ ಬಗ್ಗೆ ನಿಮಗೇನಾದರೂ ತಿಳಿದಿದೆಯೇ?

ವನಪಾಲಕ : ಆಹಾ! ಮಾವಿನ ಹಣ್ಣು, ಇದು ಮಾವಿನ ಹಣ್ಣು ದೊರೆಯೆ!

ಬ್ರಹ್ಮದತ್ತ : ಮಾವಿನ ಹಣ್ಣು! ಸೊಗಸಾದ ಹೆಸರು ! ಇದೆಲ್ಲಿ ಬೆಳೆಯುತ್ತದೆ?

ವನಪಾಲಕ : ನಮ್ಮ ರಾಜ್ಯದಲ್ಲಂತೂ ಬೆಳೆಯುವುದಿಲ್ಲ. ದೂರದ ಹಿಮಾಲಯದ ಕಣಿವೆಗಳಲ್ಲಿ ಬೆಳೆಯುತ್ತದೆ.

ಬ್ರಹ್ಮದತ್ತ : ಹಾಗೋ ಸಂಗತಿ! ಏನೇ ಇರಲಿ ಈಗಂತೂ ಇದನ್ನು ತಿನ್ನುವುದು ಬೇಡ! ಯಾರಲ್ಲಿ? ಈ ಹಣ್ಣನ್ನು ಜೋಪಾನವಾಗಿ ಅರಮನೆ ತಲುಪಿಸವ ವ್ಯವಸ್ಥೆ ಮಾಡಿ. ನನ್ನ ರಾಣಿಯರು ಹಾಗೂ ಪರಿವಾರದವರೊಡನೆ ಹಂಚಿ ತಿನ್ನಬೇಕು.

**ಪೂರಕ ಓದಿಗೆ**

# ಮೊಲದ ತ್ಯಾಗ

ಹಿಂದಿನ ಒಂದು ಜನ್ಮದಲ್ಲಿ ಬುದ್ಧನು ಮೊಲವಾಗಿ ಜನಿಸಿ ಒಂದು ಕೊಳದ ಬಳಿ ವಾಸವಾಗಿದ್ದನು. ಆ ಕೊಳದ ನೀರು ತಿಳಿಯಾಗಿ ಪರಿಶುದ್ಧವಾಗಿತ್ತು. ಇಂದ್ರನೀಲ ಮಣಿಯಂತೆ ಥಳಥಳಿಸುತ್ತಿತ್ತು. ಕೊಳದ ಸುತ್ತಲು ಕಾಡಿನಲ್ಲಿ ಹುಲ್ಲು ಪಚ್ಚೆಯಂತೆ ಹಸುರಾಗಿ ಕೋಮಲವಾಗಿ ಬೆಳೆದಿತ್ತು. ಅಲ್ಲಿನ ಗಿಡಗಳಲ್ಲಿ ಹೂಗಳೂ ಹಣ್ಣುಗಳೂ ಗೊಂಚಲು ಗೊಂಚಲಾಗಿ ತುಂಬಿಕೊಂಡಿದ್ದವು. ಆ ಅಡವಿಯು ಗಿಡ, ಮರ, ಬಳ್ಳಿ ವನಸ್ಪತಿಗಳಿಂದ ತುಂಬಿ ನೋಟಕ್ಕೆ ಅತಿ ಸುಂದರವಾಗಿತ್ತು. ಅಲ್ಲಿ ಗಾಳಿಯೂ ಹಿತಕರವಾಗಿ ಸುಳಿಯುತ್ತಿತ್ತು. ಆ ಕಾಡಿನ ಸೊಗಸಿಗೆ ಮನಸೋತು ಜನರು ಅಲ್ಲಿಗೆ ಬರುತ್ತಾ ಇದ್ದರು.

ಮೊಲ ಬಹಳ ಬಲಶಾಲಿಯಾಗಿದ್ದರೂ ಸೌಮ್ಯವಾಗಿಯೂ, ಸುಂದರವಾಗಿಯೂ, ಬುದ್ಧಿ ಶಾಲಿಯಾಗಿಯೂ ಇತ್ತು. ಅದರ ತೇಜಸ್ಸನ್ನೂ, ಗಾಂಭೀರ್ಯವನ್ನೂ ಬುದ್ಧಿಶಕ್ತಿಯನ್ನೂ ಮೆಚ್ಚಿ ಕಾಡಿನ ಎಲ್ಲ ಪ್ರಾಣಿಗಳೂ ಸೇರಿ ಅದನ್ನು ತಮ್ಮ ರಾಜನನ್ನಾಗಿ ಮಾಡಿಕೊಂಡವು.

ಆ ವನದ ಪ್ರಾಣಿಗಳಲ್ಲಿ ಒಂದು ಮಂಗ, ಒಂದು ನರಿ, ಒಂದು ನೀರು ನಾಯಿ ಈ ಮೂವರು ಮೊಲದ ಜೀವದ ಗೆಳೆಯರಾಗಿದ್ದರು. ಆ ಗೆಳೆಯರು ಪ್ರತಿದಿನ ಸಂಜೆಯ ಸಮಯದಲ್ಲಿ ಒಂದುಕಡೆ ತಪ್ಪದೆ ಸೇರುತ್ತಿದ್ದರು. ನಿತ್ಯವು ಮಾತನಾಡುತ್ತಾ ಚರ್ಚೆ ಮಾಡುತ್ತಾ ಕ್ರಮೇಣ ತಮ್ಮಲ್ಲಿದ್ದ ದುರ್ಗುಣಗಳನ್ನು ಬಿಟ್ಟು ಸದ್ಗುಣವಂತರಾದರು. ಆ ವನದ ಎಲ್ಲ ಪ್ರಾಣಿಗಳೊಡನೆ ಸ್ನೇಹವನ್ನು ಸಂಪಾದಿಸಿ ಸೌಮ್ಯದಿಂದ ನಡೆದುಕೊಳ್ಳುತ್ತಿದ್ದರು.

ಒಂದು ದಿನ ಸಾಯಂಕಾಲ ಈ ಮೂವರು ಆಪ್ತ ಮಿತ್ರರು ಮಾತಿಗೆ ಕುಳಿತಾಗ ಬಹಳ ಹೊತ್ತಾಯಿತು. ನಿರ್ಮಲವಾದ ಬಾನಿನಲ್ಲಿ ಪೂರ್ಣಚಂದ್ರ ಹೊಳೆಯುತ್ತಿದ್ದನು. ಮಧ್ಯರಾತ್ರಿಯ ಸಮಯವಾಗಿರಬಹುದು. ಆಗ ವನರಾಜನಾದ ಮೊಲ ಇವರನ್ನು ಕಂಡು, 'ಗೆಳೆಯರೆ ನಾಳೆ ಪವಿತ್ರವಾದ ಹಬ್ಬ ಆದುದರಿಂದ ನಾವು ನಾಳೆ ಏನನ್ನು ತಿನ್ನಬಾರದು. ಉಪವಾಸಮಾಡಿ ದೇವರನ್ನು ಧ್ಯಾನಿಸಬೇಕು. ಅಲ್ಲದೆ ನಮಗೆ ಸಿಕ್ಕ ಆಹಾರವನ್ನು ಹಸಿದವರಿಗೆ ದಾನಮಾಡಬೇಕು' ಎಂದು ಹೇಳಿತು. ಮೊಲದ ಈ ಮಾತಿಗೆ ಮೆಚ್ಚಿ ಈ ಮೂವರು ಗೆಳೆಯರು ಸಮ್ಮತಿಸಿದರು.

ಮರುದಿನ ಮಂಗ ಸಮೀಪದ ಒಂದು ಮಾವಿನ ತೋಪಿಗೆ ಹೋಗಿ ಒಳ್ಳೊಳ್ಳೆಯ ಹಣ್ಣುಗಳನ್ನು ಆರಿಸಿ ತಂದಿತು. ಆ ಹಣ್ಣುಗಳನ್ನು ಒಂದೆಡೆ ಇಟ್ಟುಕೊಂಡು ಯಾರಾದರೂ ಹಸಿದವರು ಬಂದರೆ ಕೊಡಬೇಕೆಂದು ಕಾಯುತ್ತ ಕುಳಿತಿತು. ಯಾರೂ ಬರದಿದ್ದರೆ ತನಗೆ ನಾಳೆ ಒಳ್ಳೆಯ ಆಹಾರವಾಗುತ್ತದೆ ಎಂದು ಯೋಚಿಸಿತು.

ಅದರಂತೆ ನರಿಯೂ ಆಹಾರವನ್ನು ಹುಡುಕುತ್ತ ಹೊರಟಿತು. ಒಂದು ಗುಡಿಸಲಿನ ಹೊರಗೆ ಮೊಸರಿನ ಒಂದು ಚಿಕ್ಕ ಪಾತ್ರೆಯನ್ನು ಕಂಡಿತು. ಅದರ ಒಡೆಯರು

ಯಾರಾದರೂ ಇರಬಹುದೆ ಎಂದು ಸ್ವಲ್ಪ ಹೊತ್ತು ಅಲ್ಲಿಯೇ ಕಾದುಕುಳಿತಿತು. ಯಾರೂ ಬರಲಿಲ್ಲ. ಇದು ಯಾರ ವಸ್ತು ಎಂದು ಗಟ್ಟಿಯಾಗಿ ಮೂರು ನಾಲ್ಕು ಸಲ ಕೂಗಿತು. ಯಾರೂ ಬರಲಿಲ್ಲ. ಆಗ ಮೊಸರಿನ ಪಾತ್ರೆಯನ್ನು ಬಾಯಲ್ಲಿ ಕಚ್ಚಿಕೊಂಡು ಹೋಯಿತು. ಅದನ್ನು ಒಂದು ಕಡೆ ಇಟ್ಟು ಯಾರಾದರೂ ಹಸಿದು ಬಂದವರಿಗೆ ಕೊಡಬೇಕೆಂದು ಕಾದು ಕುಳಿತಿತು. ಯಾರೂ ಬರದಿದ್ದರೆ ನಾಳೆ ತನಗೆ ಒಳ್ಳೆಯ ಊಟವಾಗುತ್ತದೆ ಎಂದು ಯೋಚಿಸಿತು.

ಇದೇ ರೀತಿ ನೀರುನಾಯಿ ಆಹಾರವನ್ನು ಹುಡುಕುತ್ತಾ ಹೋಯಿತು. ಒಬ್ಬ ಮೀನುಗಾರ ಮೀನುಗಳನ್ನು ಹಿಡಿದು ರಾಶಿ ಹಾಕುತ್ತಿದ್ದನು. ಅಲ್ಲಿಯೇ ಸ್ವಲ್ಪ ದೂರದಲ್ಲಿ ಮರಳಿನಮೇಲೆ ಒಂದು ಮೀನು ಬಿದ್ದಿತ್ತು. ಇದರ ಒಡೆಯರು ಯಾರಾದರೂ ಇರಬಹುದೇನೋ ಎಂದು ಕಾದು ನೋಡಿತು. ಯಾರೂ ಬರಲಿಲ್ಲ. ಈ ಮೀನು ಯಾರದು ಎಂದು ಮೂರು ನಾಲ್ಕು ಸಲ ಗಟ್ಟಿಯಾಗಿ ಕೂಗಿತು. ಯಾರೂ ಬರಲಿಲ್ಲ. ಆಗ ಆ ಮೀನನ್ನು ಕಚ್ಚಿಕೊಂಡು ಬಂದು ಒಂದುಕಡೆ ಇಟ್ಟಿತು. ಯಾರಾದರೂ ಹಸಿದು ಬಂದು ಕೇಳಿದರೆ ಕೊಡಬೇಕೆಂದು ಕಾದು ಕುಳಿತಿತು. ಯಾರೂ ಬಾರದಿದ್ದರೆ ನಾಳೆ ತನಗೆ ಒಳ್ಳೆಯ ತಿಂಡಿಯಾಗುತ್ತದೆ ಎಂದು ಯೋಚಿಸಿತು.

ಮೊಲದ ಆಹಾರ ಹುಲ್ಲು. ಅದು ಬೇಕಾದಷ್ಟು ಬೆಳೆದಿತ್ತು. ಮನುಷ್ಯರು ಹುಲ್ಲನ್ನು ತಿನ್ನುವುದಿಲ್ಲ. ಇದನ್ನು ಯಾರಿಗೆ ಕೊಡಲಿ ಏನು ಮಾಡಲಿ ಎಂದು ಮೊಲ ಬಹಳ ಚಿಂತೆಗೆ ಒಳಗಾಯಿತು. ಆಗ ಮನುಷ್ಯರು ಮಾಂಸವನ್ನು ತಿನ್ನುವರೆಂಬ ವಿಷಯ ಹೊಳೆಯಿತು. ಆನಂದದಿಂದ ಕುಣಿದಾಡಿತು. "ಒಬ್ಬನ ಹಸಿವನ್ನು ಹಿಂಗಿಸಲು ತನ್ನ ಮಾಂಸವನ್ನೇ ಕೊಡುತ್ತೇನೆ. ಖಂಡಿತವಾಗಿಯೂ ಕೊಟ್ಟು ಧನ್ಯನಾಗುತ್ತೇನೆ." ಎಂದು ದೃಢ ನಿರ್ಧಾರದಿಂದ ಪ್ರತಿಜ್ಞೆ ಮಾಡಿತು. ಈ ಪ್ರತಿಜ್ಞೆಯನ್ನು ಕೇಳಿ ಭೂದೇವಿಗೆ ರೋಮಾಂಚನವಾಯಿತು. ಸಮುದ್ರ ಅಲ್ಲೋಲ ಕಲ್ಲೋಲವಾಯಿತು. ಆಕಾಶ ನಿರ್ಮಲ ನೀಲವರ್ಣದಿಂದ ಬೆಕ್ಕಸ ಬೆರಗಾಯಿತು. ಆಕಾಶದಿಂದ ಹೂಮಳೆ ಸುರಿಯಿತು. ಗಾಳಿಯು ಸುಳಿಸುಳಿದು ನರ್ತಿಸುತ್ತ ಪುಷ್ಪಪರಾಗವನ್ನು ತಂದು ಸುರಿದು ಸನ್ಮಾನಿಸಿತು.

ಈ ಪ್ರತಿಜ್ಞೆಯನ್ನು ಪರೀಕ್ಷಿಸಬೇಕೆಂದು ದೇವೇಂದ್ರನು ಮನಸ್ಸು ಮಾಡಿದನು. ಬಡ ಹಾದಿಕಾರನ ವೇಷದಿಂದ ಮಧ್ಯಾಹ್ನ ಆ ವನಕ್ಕೆ ಬಂದನು. 'ನನ್ನ ಗುಂಪಿನ ಗೆಳೆಯರನ್ನು ಅಗಲಿ ದಾರಿತಪ್ಪಿ ಬಂದಿದ್ದೇನೆ. ನನಗೆ ಬಹಳ ಹಸಿವಾಗಿದೆ' ಎಂದು ಕೂಗುತ್ತಾ ಮಂಗನ ಬಳಿಗೆ ಬಂದನು. ಮಂಗ ತನ್ನಲ್ಲಿದ್ದ ಹಣ್ಣುಗಳನ್ನು ಕೊಡಲು ಹೋಯಿತು. ಆಗ ವೇಷಧಾರಿಯಾದ ಶಕ್ರನು ಸ್ವಲ್ಪ ತಾಳು ಬರುತ್ತೇನೆ ಎಂದು ಮುಂದೆ ಹೋದನು. ನರಿಯ ಬಳಿಗೆ ಹೋಗಿ 'ಹಸಿವು ಹೆಚ್ಚಾಗಿದೆ ಅನ್ನವನ್ನು ಕೊಡಿರಪ್ಪಾ' ಎಂದು ಕೂಗಿದನು. ನರಿ ತನ್ನಲ್ಲಿದ್ದ ಆಹಾರವನ್ನು ಕೊಡಲು ಹೋಯಿತು, ಹುಸಿವೇಷದ ಇಂದ್ರನು ಬರುತ್ತೇನೆ 'ಸ್ವಲ್ಪ ತಾಳು' ಎಂದು ಹೇಳಿ ನೀರುನಾಯಿಯ ಹತ್ತಿರ ಬಂದನು. 'ಹಸಿವನ್ನು ತಾಳಲಾರೆ ಏನಾದರೂ ದಾನ ಮಾಡಿರಯ್ಯ' ಎಂದು ಕೂಗಿದನು. ನೀರುನಾಯಿ ತನ್ನಲ್ಲಿದ್ದ ಮೀನನ್ನು ಕೊಡಲು ಹೋಯಿತು. ಇಂದ್ರನು ಬರುತ್ತೇನೆ ಸ್ವಲ್ಪ ತಾಳು ಎಂದು ಹೇಳುತ್ತಾ ಮೊಲದ ಸಮೀಪಕ್ಕೆ ಹೋದನು. 'ಅಯ್ಯೋ ನನಗೆ ತಾಳಲಾರದ ಹಸಿವು ಇಲ್ಲಿ ನನ್ನ ಹಸಿವನ್ನು ಹಿಂಗಿಸುವವರು ಯಾರೂ ಇಲ್ಲವೆ' ಎಂದು ಕೂಗಿದನು. ಮೊಲ ಬಂದು 'ನನ್ನ ಮಾಂಸವನ್ನು ತಿಂದು ತೃಪ್ತಿಪಡು ಎಂದಿತು. ಅದಕ್ಕೆ ಇಂದ್ರನು 'ಅಯ್ಯಾ ಪ್ರಾಣವನ್ನೇ ಕೊಡಲು ಹಿಂಜರಿಯದೆ ದಯೆ ತೋರಿದ ನಿನ್ನನ್ನು ಹೇಗೆ ಕೊಲ್ಲಲಿ. ಖಂಡಿತ ಸಾಧ್ಯವಿಲ್ಲ'

ಎಂದನು. ಮೊಲಕ್ಕೆ ಬಹಳ ವ್ಯಥೆಯಾಯಿತು. ಒಬ್ಬರ ಹಸಿವನ್ನು ಹಿಂಗಿಸುವುದು ನನ್ನಿಂದಾಗಲಿಲ್ಲವಲ್ಲಾ ಎಂಬ ದುಃಖದಿಂದ ಸಂಕಟಪಡುತ್ತಿತ್ತು.

ಸ್ವಲ್ಪ ದೂರದಲ್ಲಿ ಇಂದ್ರನ ಮಾಯೆಯಿಂದ ಬೆಂಕಿ ಹತ್ತಿಕೊಂಡಿತು. ಬಂಗಾರದ ಬಣ್ಣದಂತೆ ಉರಿಗಳು ಮೇಲೇಳುತ್ತಿದ್ದವು. ಅದನ್ನು ಕಂಡ ಮೊಲ ಹರ್ಷದಿಂದ ಬೆಂಕಿಯ ಬಳಿಗೆ ಓಡೋಡಿ ಹೋಯಿತು. ತನ್ನ ಮೈಮೇಲೆ ಸಣ್ಣ ಕ್ರಿಮಿಕೀಟಗಳಿದ್ದರೆ ಬೆಂಕಿಯಿಂದ ಅವು ಸಾಯಬಾರದೆಂದು ಮೈಯನ್ನು ಎರಡು ಮೂರು ಸಲ ಚೆನ್ನಾಗಿ ಕೊಡವಿತು. ರಭಸದಿಂದ ನುಗ್ಗಿ ಬೆಂಕಿಯಲ್ಲಿ ಬಿದ್ದಿತು. ಅದರ ಮೈ ಸುಟ್ಟಿತೆ? ಇಲ್ಲ ಅಗ್ನಿದೇವನು ಹೂವಿನ ರಾಶಿಯಂತೆ ತಂಪಾಗಿ ಅದರ ಆಯಾಸವನ್ನು ನಿವಾರಿಸಿದನು.

ಇಂದ್ರನು ತನ್ನ ಕೈಗಳಿಂದ ಹೂವನ್ನೆತ್ತುವಂತೆ ಮೃದುವಾಗಿ ಮೊಲವನ್ನೆತ್ತಿಕೊಂಡು ಸ್ವರ್ಗಕ್ಕೆ ಹೋದನು. ದೇವ ಸಭೆಯಲ್ಲಿ ಅದರ ತ್ಯಾಗವನ್ನು ಬಾಯ್ತುಂಬ ಹೊಗಳಿದನು. ಅದರ ವಿಗ್ರಹಗಳನ್ನು ರತ್ನದಲ್ಲಿ ಕೆತ್ತಿಸಿ ತನ್ನರಮನೆಯ ಮೇಲೆ ಒಂದನ್ನು ಸ್ಥಾಪಿಸಿ ಅದಕ್ಕೆ ವೈಗ್ರವಂತ ಎಂಬ ಹೆಸರಿಟ್ಟನು. ದೇವ ಸಭಾಭವನದಲ್ಲಿ ಇನ್ನೊಂದನ್ನು ಸ್ಥಾಪಿಸಿ ಸುಧರ್ಮ ಎಂದು ಹೆಸರಿಟ್ಟನು. ಅಮೃತಕಿರಣನಾದ ಚಂದ್ರನಲ್ಲಿ ಮತ್ತೊಂದು ಮೂರ್ತಿಯನ್ನು ಸ್ಥಾಪಿಸಿದನು. ಹೀಗೆ ಅದರ ಕೀರ್ತಿಯು ಶಾಶ್ವತವಾಗಿರುಂತೆ ಮಾಡಿದನು.

**– ಸಾಧಾರ**

# ವಚನಗಳು

**ಚಟುವಟಿಕೆಗಳು**

ಗಾಂಧೀತಾತನ ಆಶ್ರಮದಲ್ಲಿ
ಇದ್ದವು ಮೂರು ಕೋತಿಗಳು
ನೀತಿಯ ಸಾರುವ ಕೋತಿಗಳು

ಈ ಹಾಡಿನ ಸಾಲನ್ನು ಕೇಳಿದ್ದಿರಾ? ಇವುಗಳು ಸಾರುವ ನೀತಿಯೇನು? ತರಗತಿಯಲ್ಲಿ ಚರ್ಚೆ ನಡೆಯಲಿ. ಚಿತ್ರಗಳನ್ನು ಚಾರ್ಟಿನಲ್ಲಿ ಪ್ರದರ್ಶಿಸಬೇಕು. ಈ ಚಿತ್ರವು ಕೆಟ್ಟದ್ದನ್ನು ಕೇಳಬಾರದು, ಕೆಟ್ಟದ್ದನ್ನು ನೋಡಬಾರದು. ಕೆಟ್ಟದ್ದನ್ನು ಆಡಬಾರದು ಎಂಬ ನೀತಿಯನ್ನು ಸಾರುತ್ತದೆ. ಇದೇ ರೀತಿಯ ಕೆಲವು ನೀತಿಗಳನ್ನು ಪಾಠಭಾಗದಲ್ಲಿ ಕೊಟ್ಟಿರುವ ವಚನಗಳಲ್ಲೂ ಹೇಳಲಾಗಿದೆ.

❑ **ಕಾರಣ ಹೇಳಿರಿ**

ಮಕ್ಕಳು ವೈಯಕ್ತಿಕವಾಗಿ ಬಸವಣ್ಣನವರ ವಚನಗಳನ್ನು ಓದಲಿ. ಬಳಿಕ ಅವರಿಗೆ ಇಷ್ಟದ / ಆಸಕ್ತಿಯ ವಚನವನ್ನು ಗುರುತಿಸಲಿ. ವಚನವು ಯಾಕೆ ಇಷ್ಟವಾಯಿತು ಎಂಬದನ್ನು ತಿಳಿಸಲಿ.

- ಇದರೊಂದಿಗೆ ಅಧ್ಯಾಪಕರು ಆ ವಚನಗಳಲ್ಲಿ ಅಡಗಿರುವ ನೀತಿಯ ಕುರಿತು ಚರ್ಚಿಸುವುದು. ಅದಕ್ಕಾಗಿ ಈ ಪ್ರಶ್ನೆಗಳನ್ನು ಬಳಸಿಕೊಳ್ಳಬಹುದು. ಉದಾ: ಅಂತರಂಗ ಶುದ್ಧಿ ಎಂದರೇನು?
- ನುಡಿದರೆ ಮುತ್ತಿನ ಹಾರದಂತಿರಬೇಕು ಎಂದರೇನು?
- ಶಿವಭಕ್ತನಾಗಿದ್ದು ತನ್ನಂತಯೆ ಇತರ ಶಿವಭಕ್ತರನ್ನು ಕಾಣಬೇಕು ಎಂಬುದಕ್ಕೆ ಬಸವಣ್ಣನವರು ನೀಡಿದ ಉದಾಹರಣೆ ಯಾವುದು?

## ❑ ಪ್ರಾಸಪದಗಳನ್ನು ಬರೆಯಿರಿ

ಮಕ್ಕಳು ವಚನಗಳಲ್ಲಿ ಬಂದ ಪ್ರಾಸಪದಗಳನ್ನು ಗುರುತಿಸಿ ಬರೆಯಲಿ.

## ❑ ಉತ್ತರಿಸಿರಿ

ಮಕ್ಕಳು ಪಾಠಭಾಗದಲ್ಲಿ ನೀಡಲಾದ ವಚನಗಳಿಗೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರ ಬರೆದು ಮಂಡಿಸಲಿ. ಮಂಡನೆಯ ಬಳಿಕ ಉತ್ತರದ ಬಗ್ಗೆ ಚರ್ಚೆ ನಡೆಸುವುದು ಮತ್ತು ಉತ್ತಮಪಡಿಸುವುದು.

## ❑ ವಚನಗಳನ್ನು ಹಾಡುವುದು ಹೇಗೆ?

ಅಧ್ಯಾಪಕರು ಹಾಡುವುದು ಅಥವಾ ವಚನಗಳನ್ನು ಹಾಡುವ ರೀತಿಯನ್ನು ತಿಳಿಯಲು ವಚನ ಗಾಯನದ ಧ್ವನಿ ಸುರುಳಿಯನ್ನು ಕೇಳಿಸುವುದು.

## ❑ ಪದ ವಿಂಗಡನೆ

ಸಂಯುಕ್ತ ಪದಗಳನ್ನು ಸರಿಯಾಗಿ ವಿಂಗಡಿಸುವುದರ ಮೂಲಕ ಆ ಸಾಲಿನ ಆಶಯವನ್ನು ತಿಳಿಯಲು ಸಾಧ್ಯ. ಅದೇರೀತಿ ವಿಂಗಡಿಸುವುದು ತಪ್ಪಾದರೆ ಆಶಯವೂ ತಪ್ಪಾಗಬಹುದು.

ಉದಾ:

ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯ ಎಂಬುದನ್ನು

ಕೂಡಲ ಸಂಗಯ್ಯನಂತೆ + ಅಲ್ಲದೆ + ಒಲ್ಲನಯ್ಯ ಎಂದೂ

ಕೂಡಲ ಸಂಗಯ್ಯನು + ಅಂತಲ್ಲದೆ + ಒಲ್ಲನಯ್ಯ ಎಂದೂ

ಕೂಡಲ ಸಂಗಯ್ಯನು + ಅಂತು + ಅಲ್ಲದೆ + ಒಲ್ಲನು + ಅಯ್ಯ ಎಂದೂ ವಿಂಗಡಿಸಬಹುದು.

ಈ ಮೂರು ಪದ ವಿಂಗಡನೆಗಳಲ್ಲಿ ಈ ಸಂದರ್ಭಕ್ಕೆ ಸರಿಯಾದುದು ಯಾವುದು? ಯಾಕೆ? ಇಲ್ಲಿ ಉಂಟಾಗುವ ಅರ್ಥವ್ಯತ್ಯಾಸವನ್ನು ಗಮನಿಸಿದಿರಲ್ಲವೇ?

ಈ ವಚನದಲ್ಲಿ ಎರಡನೇ ಮತ್ತು ಮೂರನೇ ರೀತಿಯಲ್ಲಿ ವಿಂಗಡಿಸಿದುದು ಈ ಸಂದರ್ಭಕ್ಕೆ ಸರಿಯಾದುದಾಗಿದೆ ಎಂದು ಮನಗಾಣಬಹುದು. ಆದುದರಿಂದ ವಾಕ್ಯದ ಅಥವಾ ಕವಿತೆಯ ಸಾಲಿನ ಆಶಯ ಸ್ಪಷ್ಟವಾಗಬೇಕಾದರೆ ಸರಿಯಾದ ರೀತಿಯಲ್ಲಿ ವಿಂಗಡಿಸುವ ಸಾಮರ್ಥ್ಯವನ್ನು ಮಕ್ಕಳಲ್ಲಿ ಬೆಳೆಸಬೇಕಾಗಿದೆ. ಇದಕ್ಕಾಗಿ ಪಠ್ಯಪುಸ್ತಕದಲ್ಲಿ ಇಂತಹ ಚಟುವಟಿಕೆಗಳನ್ನು ನೀಡಲಾಗಿದೆ. ಮಕ್ಕಳು ಓದುವ ಸಂದರ್ಭದಲ್ಲಿ ಈ ಚಟುವಟಿಕೆಯನ್ನು ನಡೆಸಬಹುದು.

ಅಹುದಹುದೆನಬೇಕು – ಅಹುದು + ಅಹುದು + ಎನಬೇಕು

ಧರ್ಮವದಾವುದಯ್ಯ – ಧರ್ಮವು + ಅದು + ಆವುದು + ಅಯ್ಯ

ಕಾಗೆಯೊಂದಗುಳ – ಕಾಗೆ + ಒಂದು + ಅಗುಳ

ದೇವನೆಂತೊಲಿವನಯ್ಯ – ದೇವನು + ಎಂತು + ಒಲಿವನು + ಅಯ್ಯ

## ❑ ಹೋಲಿಸಿ ಬರೆಯಿರಿ

ಇಲ್ಲಿ ಬಸವಣ್ಣನವರ ವಚನಗಳ ಭಾಗವನ್ನೂ ಸರ್ವಜ್ಞನ ವಚನಗಳ ಭಾಗವನ್ನೂ ಕೊಡಲಾಗಿದೆ. ಇವುಗಳನ್ನು ಹೋಲಿಸುವಂತೆ ಮಕ್ಕಳನ್ನು ಪ್ರೇರೇಪಿಸಬೇಕು.

- ಈ ಎರಡು ವಚನಗಳಲ್ಲಿ ಒಂದೇ ರೀತಿ ಕಾಣುವ ಅಂಶಗಳು ಯಾವುವು?
- ಕಾಗೆಯೊಂದಗುಳ ಕಂಡರೆ ಕರೆಯದೆ ತನ್ನ ಬಳಗವನ್ನು ಎಂಬ ಮಾತನ್ನು ಬಸವಣ್ಣನವರು ಯಾವುದಕ್ಕೆ ಅನ್ವಯಿಸಿದ್ದಾರೆ?

ಸರ್ವಜ್ಞನು ಯಾವುದಕ್ಕೆ ಅನ್ವಯಿಸಿದ್ದಾನೆ?

ಎಂಬೀ ಪ್ರಶ್ನೆಗಳ ಮೂಲಕ ವಚನಗಳಲ್ಲಿರುವ ಆಶಯವನ್ನು ಮಕ್ಕಳು ಮನಗಾಣಬೇಕು. ಬಳಿಕ ಗುಂಪಿನಲ್ಲಿ ಕುಳಿತು ವಚನಗಳನ್ನು ಹೋಲಿಸಿ ವೈಯಕ್ತಿಕವಾಗಿ ಸಾಮ್ಯ ವ್ಯತ್ಯಾಸಗಳನ್ನು ಬರೆದು ಮಂಡಿಸಲಿ.

ಅಧ್ಯಾಪಕರ ಮಂಡನೆಯ ಬಳಿಕ ಮಕ್ಕಳು ತಮ್ಮ ಟಿಪ್ಪಣಿಯನ್ನು ಉತ್ತಮಪಡಿಸಿ ಬರೆಯಲಿ.

## ಹೋಲಿಕೆಯ ಟಿಪ್ಪಣಿ ಹೀಗೂ ಆಗಬಹುದಲ್ಲವೇ?

ಇಲ್ಲಿ ನೀಡಿರುವ ವಚನಗಳಲ್ಲಿ ಮೊದಲನೆಯದು ಬಸವಣ್ಣನವರ ವಚನವಾದರೆ ಎರಡನೆಯದು ಸರ್ವಜ್ಞನ ವಚನವಾಗಿದೆ. ಮೊದಲನೆಯ ವಚನವು ಪದ್ಯದ ಲಯವಿರುವ ಗದ್ಯದಲ್ಲಿದ್ದರೆ ಇನ್ನೊಂದು ತ್ರಿಪದಿಯ ರೂಪದಲ್ಲಿರುವ ಪದ್ಯವಾಗಿದೆ.

ಕಾಗೆ ಕೋಳಿಗಳು ಆಹಾರ ದೊರಕಿದ ಕೂಡಲೇ ತಮ್ಮ ಬಳಗವನ್ನೆಲ್ಲಾ ಕರೆದು ತಮಗೆ ಸಿಕ್ಕಿದ ಆಹಾರವನ್ನು ಹಂಚಿ ತಿನ್ನುತ್ತವೆ ಎಂಬ ಆಶಯವು ಎರಡೂ ಪದ್ಯದಲ್ಲಿದೆ. ಆದರೆ ಮನುಷ್ಯನು ಕಾಗೆ ಕೋಳಿಗಳ ರೀತಿಯಲ್ಲಿ ವರ್ತಿಸುವುದಿಲ್ಲ. ಆತನು ಸ್ವಾರ್ಥಿಯಾಗಿ ಸಿಕ್ಕಿದ್ದನ್ನು ತಾನೊಬ್ಬನೇ ಅನುಭವಿಸುವ ಬಗ್ಗೆ ಯೋಚಿಸುತ್ತಾನೆ. ಅಂಥವನ ಬಾಳು ಕಾಗೆ ಕೋಳಿಗಳ ಬದುಕಿಗಿಂತಲೂ ಕೆಳಮಟ್ಟದ್ದಾಗಿ ಪರಿಣಮಿಸುತ್ತದೆ ಎಂಬುದನ್ನು ವಚನಕಾರರು ಮಾರ್ಮಿಕವಾಗಿ ತಿಳಿಸಿದ್ದಾರೆ. ಒಂದನೆಯ ಪದ್ಯದಲ್ಲಿ ಬಸವಣ್ಣನವರು ದೇವರ ಭಕ್ತಿ ಇಲ್ಲದವರ ಗತಿಯು ಕೂಡಾ ನೀಚವಾದುದು ಎಂದು ತಿಳಿಸಿದ್ದಾರೆ. ಬಸವಣ್ಣನವರ ವಚನಗಳು ಕೂಡಲಸಂಗಮ ದೇವ ಎಂಬ ಅಂಕಿತದಿಂದ ಕೊನೆಗೊಳ್ಳುತ್ತವೆ. ಆದರೆ ಸರ್ವಜ್ಞನ ವಚನಗಳ ಕೊನೆಯಲ್ಲಿ ಸರ್ವಜ್ಞ ಎಂಬ ಅಂಕಿತವಿರುತ್ತದೆ.

## ❑ ಅನುಭವ ಬರೆಯಿರಿ

ಮಕ್ಕಳು ಇದುವರೆಗೆ ಹಲವಾರು ಜನರೊಂದಿಗೆ ವ್ಯವಹರಿಸಬೇಕಾದ ಸಂದರ್ಭ ಒದಗಿಬಂದಿರಬಹುದು. ಅಂತಹ ಸಂದರ್ಭದಲ್ಲಿ ಅವರು ಜನರ ನಡತೆಗಳಿಂದ ಅಥವಾ ಮಾತುಗಳಿಂದ ಸಂತೋಷಪಟ್ಟಿರಬಹುದು, ಕೆಲವೊಮ್ಮೆ ದುಃಖಕ್ಕೂ ಒಳಗಾಗಿರಬಹುದು. ಇಂತಹ ಒಂದು ಘಟನೆಯನ್ನು ನೆನಪಿಸುವಂತೆ ಮಕ್ಕಳನ್ನು ಪ್ರೇರೇಪಿಸಬೇಕು. ಬಳಿಕ ಮಕ್ಕಳು ಅನುಭವ ಟಿಪ್ಪಣಿ ತಯಾರಿಸಲಿ.

## ಅನುಭವ ಟಿಪ್ಪಣಿಯಲ್ಲಿ ಏನಿರಬೇಕು?

- ಆಶಯ ಪೂರ್ಣತೆ (ದುಃಖ ಅಥವಾ ಸಂತೋಷಕ್ಕೆ ಕಾರಣವಾದ ಅಂಶಗಳನ್ನು ಸ್ಪಷ್ಟವಾಗಿಯೂ ಸಮಗ್ರವಾಗಿಯೂ ಬರೆದಿರಬೇಕು.
- ಸ್ಪಷ್ಟವಾದ ಬರವಣಿಗೆ – (ಪದ, ವಾಕ್ಯ, ಅಕ್ಷರಗಳಲ್ಲಿ ದೋಷವಿಲ್ಲದಿರುವುದು ಲೇಖನ ಚಿಹ್ನೆಗಳನ್ನು ಬಳಸಿರುವುದು ಇತ್ಯಾದಿ)
- ವಸ್ತುನಿಷ್ಠತೆ (ರಚನಾ ಶೈಲಿ , ಪದ, ವಾಕ್ಯ ಬಳಕೆ)

ವೈಯಕ್ತಿಕವಾಗಿ ಬರೆಯುವುದು, ಬಳಿಕ ಓದುವುದು. ಉತ್ತಮವಾದುದನ್ನು ಅಭಿನಂದಿಸುವುದು. ತಿದ್ದುಪಡಿ ಮಾಡಿದ ಬಳಿಕದ 'ಅನುಭವ ಟಿಪ್ಪಣಿ' ಸಂಚಿಕೆ ತಯಾರಿಸುವುದು.

## ❑ ವಚನಗಳನ್ನು ಸಂಗ್ರಹಿಸಿರಿ

ಶಾಲಾ ಗ್ರಂಥಾಲಯದಿಂದ ಹಾಗೂ ಹಿರಿಯರಿಂದ ಕೇಳಿ ವಿದ್ಯಾರ್ಥಿಗಳು ವಚನಗಳನ್ನು ಸಂಗ್ರಹಿಸಲಿ

**ಆಕರ ಗ್ರಂಥಗಳು**

- ಸರ್ವಜ್ಞ ವಚನಗಳು
- ಬಸವಣ್ಣನವರ ವಚನಗಳು
- ಶರಣರ ನೂರೊಂದು ವಚನಗಳು

**ಪೂರಕ ಓದಿಗೆ**

## ಅಕ್ಕಮಹಾದೇವಿ

ಕನ್ನಡ ಸಾಹಿತ್ಯ ಪ್ರಪಂಚದ ಮೊತ್ತ ಮೊದಲನೆಯ ಕವಯಿತ್ರಿಯೆನಿಸಿದ ಅಕ್ಕಮಹಾದೇವಿ 12ನೇ ಶತಮಾನದವಳೆಂದು ಹೇಳಲಾಗಿದೆ. ಶಿವಮೊಗ್ಗ ಜಿಲ್ಲೆಯ 'ಉಡುತಡಿ'ಯಲ್ಲಿ ಜನಿಸಿದ ಇವಳು ಬಾಲ್ಯದಲ್ಲೇ ಶಿವಭಕ್ತೆಯಾಗಿದ್ದಳು. ಯೌವನದಲ್ಲಿ ಸಾಂಪ್ರದಾಯಿಕ ಸಂಕೋಲೆಗಳನ್ನು ಮುರಿದೊಗೆದು, ಮದುವೆಯನ್ನು ತಿರಸ್ಕರಿಸಿ, ಮಲ್ಲಿಕಾರ್ಜುನನೇ ತನ್ನ ಪತಿ ಹಾಗೂ ಆರಾಧ್ಯದೈವವೆಂದು ಸ್ವೀಕರಿಸಿದಳು. ಇವಳ ವಚನಗಳಲ್ಲಿ ಮನಸ್ಸಿನಾಳದ ತುಮುಲ, ಮನಸ್ಸಿನ ದಿಟ್ಟತನ, ತ್ಯಾಗ ಇತ್ಯಾದಿ ವಿಚಾರಗಳು ಹೆಚ್ಚಾಗಿವೆ.

ಉದಾ:

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದೊಡೆಂತಯ್ಯ ............

ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

## ಅಲ್ಲಮ ಪ್ರಭು

ಅಲ್ಲಮ ಪ್ರಭು 12ನೇ ಶತಮಾನದ ಖ್ಯಾತ ಶಿವಶರಣರಲ್ಲಿ ಒಬ್ಬ. ಈಗಿನ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಬೆಳ್ಳಿಗಾವೆ ಇವನ ಹುಟ್ಟೂರು. ವಚನಕಾರರ ಮೇಲೆ ಪ್ರಭಾವ ಬೀರಿದ ಈತ ವೀರಶೈವ ಸಿದ್ಧಾಂತದ ಮೂರ್ತ ಸ್ವರೂಪನಾಗಿ ಶರಣ ಮಾರ್ಗಕ್ಕೆ ಗುರುವಾದನು. ಗಹನವಾದ ಆಧ್ಯಾತ್ಮ ಹಾಗೂ ತಾತ್ವಿಕ ವಿಚಾರಗಳು ಅವನ ವಚನಗಳಲ್ಲಿ ಅಡಗಿವೆ. 'ಗುಹೇಶ್ವರ' ಎಂಬ ಅಂಕಿತವು ಇವನ ವಚನಗಳಲ್ಲಿ ಕಂಡು ಬರುತ್ತದೆ.

ಉದಾ:

ಹೊನ್ನು ಮಾಯೆಯೆಂಬರು, ಹೆಣ್ಣುಮಾಯೆಯೆಂಬರು,
ಮಣ್ಣುಮಾಯೆಯೆಂಬರು
ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆಯಲ್ಲ,
ಮಣ್ಣು ಮಾಯೆಯಲ್ಲ.
ಮನದ ಮುಂದಣದ ಆಸೆಯೇ ಮಾಯೆ ಕಾಣಾ ಗುಹೇಶ್ವರಾ

## ಸರ್ವಜ್ಞ

ಸರ್ವಜ್ಞನು ಕನ್ನಡದ ತ್ರಿಪದಿಯ ಪ್ರಮುಖ ಕವಿಗಳಲ್ಲಿ ಒಬ್ಬ. ಮೂರು ಸಾಲುಗಳಿರುವ ಪದ್ಯವನ್ನು ತ್ರಿಪದಿ ಎನ್ನುವರು. ಈತನ ಕಾಲ ಮತ್ತು ಜೀವನದ ಬಗ್ಗೆ ನಿಖರವಾಗಿ ತಿಳಿದಿಲ್ಲ. ಇವನ ಬಾಲ್ಯದ ಹೆಸರು ಪುಷ್ಪದತ್ತನೆಂದೂ ಸಾಕುತಾಯಿ ಮಲ್ಲಕ್ಕ, ತಂದೆ ಬಸವರಸನೆಂದೂ ಹೇಳಲಾಗುತ್ತದೆ. ಸರ್ವಜ್ಞನೆಂಬ ಅಂಕಿತದಿಂದ ಕೂಡಿದ ಈತನ ವಚನಗಳು ಸರಳವಾಗಿದ್ದು ನೈತಿಕ, ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳನ್ನು ಮುಖ್ಯವಾಗಿ ಪ್ರತಿಪಾದಿಸುತ್ತವೆ.

ಉದಾ:

ಚಿತ್ತವಿಲ್ಲದೆ ಗುಡಿಯ ಸುತ್ತಿದರೆ ಫಲವೇನು
ಎತ್ತು ಗಾಣವ ಹೊತ್ತು ತಾ। ನಿತ್ಯದಿ
ಸುತ್ತುಬಂದಂತೆ ಸರ್ವಜ್ಞ.

## ಸರ್ವಜ್ಞ ವಚನಗಳು

ವಿದ್ಯೆಯುಳ್ಳವನ ಮುಖ ಮುದ್ದು ಬರುವಂತಿಕ್ಕು,
ವಿದ್ಯೆಯಿಲ್ಲದನ ಬರಿಮುಖವು ಹಾಳೂರ
ಹದ್ದಿನಂತಿಕ್ಕು ಸರ್ವಜ್ಞ

ನಟ್ಟಡವಿಯ ಮಳೆ ಕಷ್ಟ ಕ್ಷಯ ಬಡತನವು
ದುಷ್ಟರ ನೆರೆ ಇವು ಐದು ಜಗದೊಳು
ನಷ್ಟ ಕಾಣಯ್ಯ ಸರ್ವಜ್ಞ

ಕೋಪ ಎಂಬುದು ತಾನು ಪಾಪದಾ ನೆಲೆಗಟ್ಟು
ಕೂಪದೊಳು ನೇಣು ಹರಿದಂತೆ ನರಕಕ್ಕೆ
ಕೋಪಿ ತಾ ಇಳಿವ ಸರ್ವಜ್ಞ

ಜಾತಿಹೀನರ ಮನೆಯ ಜ್ಯೋತಿ ತಾ ಹೀನವೇ?
ಜಾತಿ ವಿಜಾತಿಯೆನಬೇಡ ದೇವನೊಲಿ
ದಾತನೇ ಜಾತ ಸರ್ವಜ್ಞ

ನಡೆವುದೊಂದೇ ಭೂಮಿ, ಕುಡಿವುದೊಂದೇ ನೀರು
ಸುಡುವಗ್ನಿಯೊಂದೆ ಇರುತಿರೆ ಕುಲಗೋತ್ರ

## ಬಸವಣ್ಣ

ಹನ್ನೆರಡನೇ ಶತಮಾನವು ಸಾಹಿತ್ಯ ಕ್ಷೇತ್ರದಲ್ಲಿ ಅಕ್ಕಮಹಾದೇವಿ ಬಸವಾದಿ ಶರಣರು ಕ್ರಾಂತಿ ಕಹಳೆಯನ್ನು ಊದಿದ ಕಾಲವಾಗಿತ್ತು. ಧಾರ್ಮಿಕ, ಆಧ್ಯಾತ್ಮಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಹೀಗೆ ಸಮಾಜದ ಬದುಕಿನ ಎಲ್ಲಾ ಕ್ಷೇತ್ರಗಳಲ್ಲಿಯೂ ಪರಿವರ್ತನೆಯ ವಿನೂತನ ಕಾಲ. ಬಸವಣ್ಣ, ಅಲ್ಲಮಪ್ರಭು, ಚನ್ನಬಸವಣ್ಣ ಅಕ್ಕಮಹಾದೇವಿ ಮುಂತಾದವರು ಕಲ್ಯಾಣ ಕ್ರಾಂತಿಯ ಪ್ರಮುಖರು. ಇದರ ನೇತಾರರಾದ ಬಸವಣ್ಣನವರಿಗೆ ಸಹಾಯಕರಾಗಿ ನಿಂತವರು ಜಾತಿ ಹಾಗೂ ಸಮಾಜಿಕ ಸಮಾನತೆಯ ತುಳಿತಕ್ಕೆ ಒಳಗಾದವರು, ಶೋಷಿತರು, ಮಹಿಳೆಯರು, ಸ್ವಯಂ ಸ್ಫೂರ್ತಿಯಿಂದ ಬದುಕು ಕಟ್ಟಿ ಕೊಂಡವರು. ಇವರು ವಿಶ್ವಸಾಹಿತ್ಯಕ್ಕೆ ಉದಾತ್ತ ಸಂದೇಶ ನೀಡಿ ಕನ್ನಡಕ್ಕೆ ಅಮರವಾದ ಕಾಣಿಕೆ ಕೊಟ್ಟರು.

ಕಾಯಕವೇ ಕೈಲಾಸ ಎಂಬ ಬಸವಣ್ಣನವರ ತತ್ವದ ಮೇಲೆ ಸಮಾಜದಲ್ಲಿ ಬದುಕುವ ಪ್ರತಿಯೊಬ್ಬರು ತಮ್ಮ ತಮ್ಮ ಆರ್ಥಿಕ ಜೀವನೋಪಾಯಕ್ಕಾಗಿ ಒಂದು ವೃತ್ತಿಯನ್ನು ಮಾಡಬೇಕು. ಅದರಲ್ಲಿಯೇ ದೇವರನ್ನು ಕಾಣಿರೋ ಎಂದ ಬಸವಣ್ಣನವರು 'ಕಾಯಕವೇ ಕೈಲಾಸ' ಎಂದು ಅಂದಿನ ಶರಣರಿಗೆ ಪ್ರತಿಪಾದಿಸುತ್ತಿದ್ದರು. ಸಮಾಜದಲ್ಲಿ ಜೀವಿಸುವ ಪ್ರತಿಯೊಬ್ಬ ಶರಣರು ಸಮಾನರು ಎಂಬ ಬೀಜ ಬಿತ್ತಿದ ಪ್ರಥಮ ವ್ಯಕ್ತಿಯೆಂದರೆ ಬಸವಣ್ಣನವರು. ಸಮಾಜದಲ್ಲಿನ ಜಾತಿಗಳು ಕೇವಲ ಅವರವರ ಉದ್ಯೋಗದಿಂದ ಹುಟ್ಟಿ ಬಂದವುಗಳು, ಅವುಗಳನ್ನು ನಾವೇ ಮಾಡಿಕೊಂಡಿದ್ದೇವೆ. ಈ ಜಗತ್ತಿನಲ್ಲಿ ಜೀವಿಸುವ ಮಾನವರೆಲ್ಲರೂ ಒಂದೇ ಎಲ್ಲರಲ್ಲಿಯೂ ಮಾನವೀಯತೆ, ಪರಧರ್ಮ ಸಹಿಷ್ಣುತೆ ಬೇಕು ಎಂದು ಬಸವಣ್ಣನವರು ತೋರಿಸಿಕೊಟ್ಟರು.

ಮಾನವನು ಅಜ್ಞಾನದಿಂದ ಸುಜ್ಞಾನದೆಡೆಗೆ ಬರಬಹುದು. ಆದರೆ ಅವರಲ್ಲಿದ್ದ ಮೂಢನಂಬಿಕೆಗಳನ್ನು ತೆಗೆದು ಹಾಕದಿದ್ದರೆ ಅವರು ಎಷ್ಟು ವಿದ್ಯಾವಂತರಿದ್ದರೂ ಅವರಿಂದ ಸಮಾಜ ಸುಧಾರಣೆ ಸಾಧ್ಯವಿಲ್ಲ ದೇವರಲ್ಲಿ ಭಕ್ತಿ, ಶ್ರದ್ಧೆ, ನಂಬಿಕೆ ಹೊಂದಬೇಕೇ ಹೊರತು ಅವರ ಹೆಸರಿನಲ್ಲಿ ಪಶುಬಲಿ, ತೀರ್ಥಯಾತ್ರೆ ಮಾಡಿದರೆ ಫಲವಿಲ್ಲ. ಭಕ್ತಿಯಿಂದ ಮುಕ್ತಿ ಹೊಂದಲು ಶಿವನನ್ನು ನೆನೆಯುವುದೊಂದೇ ಸಾಕು. 'ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಸವಯ್ಯಾ' ಎಂದ ಬಸವಣ್ಣನವರು ಅದನ್ನು ತಾವೇ ಅಳವಡಿಸಿಕೊಳ್ಳವುರೊಂದಿಗೆ ಸಮಾಜದ ಪ್ರತಿಯೊಬ್ಬ ಶರಣರಿಗೂ ಬೋಧಿಸುತ್ತಿದ್ದರು.

ಸ್ತ್ರೀ ಸಮಾನತೆ: 12ನೇ ಶತಮಾನದಲ್ಲಿಯೂ ಸಾಮಾಜಿಕ ಅಸಮಾನತೆ ಮತ್ತು ಜಾತಿಯ ಭೂತ ಬಸವಣ್ಣನವರನ್ನು ಕಾಡುತ್ತಿತ್ತು. ಆದರೆ ಅವರು ಛಲಬಿಡದೆ, 'ಛಲಬೇಕು ಶರಣರಿಗೆ' ಎಂಬ ತತ್ವ ಬೋಧಿಸುವುದರೊಂದಿಗೆ ಎಲ್ಲರಲ್ಲಿಯೂ ಸಮಾನತೆಯ ಅರಿವು ಮತ್ತು ಜಾತಿ ನಿರ್ಮೂಲನೆ ಮಾಡುವ ಉದ್ದೇಶ ಸದಾ ಅವರ ಆತ್ಮದಲ್ಲಿ ಮನೆಮಾಡಿತ್ತು. ಸಮಾಜದಿಂದ ಬಹಿಷ್ಕರಿಸಲ್ಪಟ್ಟ ಸ್ತ್ರೀಯರಿಗೆ 'ಅನುಭವ ಮಂಟಪ' ದಲ್ಲಿ ಅವಕಾಶವಿತ್ತು. ಪುರುಷಪ್ರಧಾನ ಸಮಾಜದಲ್ಲಿ ಸ್ತ್ರೀಯರಿಗೆ ಅಷ್ಟೇ ಹಕ್ಕು ಬಾಧ್ಯತೆಗಳಿವೆ ಎಂದು ಬಸವಣ್ಣನವರು ತಿಳಿಸಿಕೊಡುತ್ತಿದ್ದರು.

ಬಸವಣ್ಣನವರ ಇನ್ನೊಂದು ಮಹತ್ವದ ಸಾಧನೆ ಎಂದರೆ ಸ್ತ್ರೀ – ಪುರುಷರನ್ನು ಸರಿ ಸಮಾನರಾಗಿ ಗ್ರಹಿಸುವಂತೆ ಮಾಡಿದ್ದು. ಪುರುಷರು ಮತ್ತು ಮಹಿಳೆಯರೆಂಬ ವರ್ಗೀಕರಣವನ್ನು ಅವರು ಎಂದೂ ಒಪ್ಪುತ್ತಿರಲಿಲ್ಲ. ಅವರ ದೃಷ್ಟಿಯಲ್ಲಿ ಇವರಲ್ಲಿ ಯಾವುದೇ ಮೇಲು ಕೀಳು ಇಲ್ಲ, ಇಬ್ಬರು ಸಮಾನ ಸತ್ವ ಉಳ್ಳವರಾಗಿದ್ದಾರೆ ಎಂಬುದು ಅವರ ಮನದಾಳದ ಮಾತಾಗಿತ್ತು. ಸಮಾಜದಲ್ಲಿ ಎಲ್ಲರೂ ಒಳ್ಳೆಯವರಾದರೆ ಉತ್ತಮ ಸಮಾಜ ನಿರ್ಮಿಸಬಹುದೆಂದು ಎಲ್ಲರಿಗೂ ತೋರಿಸಿಕೊಟ್ಟ ಬಸವಣ್ಣನವರು ಕಾಯಕ ನಿಷ್ಠೆ ಮತ್ತು ಭಕ್ತಿಯಿಂದ ಎಲ್ಲರೂ ಎಲ್ಲರನ್ನು ಸಮಾನತೆಯಿಂದ ಕಾಣುವುದು ಪ್ರತಿಯೊಬ್ಬರ ಧರ್ಮ ನೀತಿಯಾಗಿದೆ ಎಂದು ವಿವರಿಸುತ್ತಿದ್ದರು.

12ನೇ ಶತಮಾನದಲ್ಲಿ ಅನುಭವ ಮಂಟಪದಲ್ಲಿ ನಡೆಯುವ ವಿವಿಧ ಧಾರ್ಮಿಕ, ಆಧ್ಯಾತ್ಮಿಕ ಚರ್ಚೆ ವಿಚಾರಗಳಲ್ಲಿ ಮಹಿಳೆಯರು ಸಕ್ರಿಯವಾಗಿ ಭಾಗವಹಿಸುತ್ತಿದ್ದರು.

## ಮೌಲ್ಯನಿರ್ಣಯ ಚಟುವಟಿಕೆಗಳು

**ಚಟುವಟಿಕೆ 1**

ಭಾರತವು ಬ್ರಿಟಿಷರಿಂದ ಸ್ವಾತಂತ್ರ್ಯವನ್ನು ಗಳಿಸಿದ ವಿಷಯ ನಿಮಗೆಲ್ಲರಿಗೂ ತಿಳಿದಿದೆ. ಬ್ರಿಟಿಷರು ಭಾರತವನ್ನು ಆಳುತ್ತಿದ್ದರು. ನಮ್ಮ ದೇಶದ ಹಲವಾರು ಸ್ವಾತಂತ್ರ್ಯ ಹೋರಾಟಗಾರರು ಅವಿರತ ಪರಿಶ್ರಮದಿಂದ, ದೇಶಕ್ಕಾಗಿ ಪ್ರಾಣತೆತ್ತು ಭಾರತವನ್ನು ದಾಸ್ಯ ಶೃಂಖಲೆಯಿಂದ ಹೊರಬರುವಂತೆ ಮಾಡಿದುದರ ಬಗ್ಗೆ ನಾವೆಲ್ಲರೂ ಓದಿ ತಿಳಿದಿದ್ದೇವೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ನಮ್ಮ ದೇಶಪ್ರೇಮಿಗಳು ಬಳಸಿದ ಘೋಷಣಾ ವಾಕ್ಯಗಳು ಏನಾಗಿರಬಹುದು? ಊಹಿಸಿ ಬರೆಯಿರಿ.

**ಚಟುವಟಿಕೆ 2**

ಒಮ್ಮೆ ರಾಮಣ್ಣನಿಗೆ ಏನೋ ಕಾಯಿಲೆಯಾಯಿತು. ಕುಂಬಳಕಾಯಿ ಲೇಹ್ಯತಿಂದರೆ ಕಾಯಿಲೆ ವಾಸಿ ಯಾಗಬಹುದೆಂದು ವೈದ್ಯರು ಹೇಳಿದರು. ಅವರ ಊರಿನಲ್ಲಿ ಕುಂಬಳ ಕಾಯಿ ಇರಲಿಲ್ಲ. ಮಗ ಗೋಪಾಲನನ್ನು ಕರೆದು "ಎಲ್ಲಿಂದಲಾದರೂ ಒಂದು ಕುಂಬಳ ಕಾಯಿ ತೆಗೆದುಕೊಂಡು ಬಾ " ಎಂದು ಕಳುಹಿಸಿದನು. ಇದನ್ನು

ಕೇಳಿದ ಗೋಪಾಲನ ಅಜ್ಜಿ "ಕುಂಬಳ ಕಾಯಿ ತರುವುದೇನೋ ಸರಿ, ಆದರೆ ಹಣಕೊಡದೆ ಪುಕ್ಕಟೆಯಾಗಿ ಮಾತ್ರ ತರಬೇಡ" ಎಂದು ಎಚ್ಚರಿಸಿದರು. ಅಜ್ಜಿಯ ಮಾತಿಗೆ ಗೋಣಾಡಿಸಿದ ಗೋಪಾಲ ಕುಂಬಳ ಕಾಯಿ ಹುಡುಕಿಕೊಂಡು ಊರೂರು ಅಲೆದ. ಎಲ್ಲಿಯೂ ಕುಂಬಳ ಕಾಯಿ ಸಿಗದೆ ಬೇಸರಗೊಂಡ. ಕೊನೆಗೆ ಒಂದು ಹೊಲದಲ್ಲಿ ರೈತರು ಕುಂಬಳ ಕಾಯಿ ಬೆಳಸಿದ್ದನ್ನು ಕಂಡು ಸಂತಸಗೊಂಡ ಗೋಪಾಲ ರೈತನೊಡನೆ ಒಂದು ಕುಂಬಳಕಾಯಿಗೆ ಎಷ್ಟು ಬೆಲೆ? ಎಂದು ಕೇಳಿದನು. "ಸ್ವಾಮಿ, ನಮ್ಮೂರಲ್ಲಿ ಕುಂಬಳಕಾಯಿಗೆ ಯಾರೂ ಹಣ ಪಡೆದುಕೊಳ್ಳುವುದಿಲ್ಲ, ಪುಕ್ಕಟೆಯಾಗಿ ಒಂದಲ್ಲ ಹತ್ತು ತೆಗೆದುಕೊಂಡು ಹೋಗಿ" ಎಂದನು. ಗೋಪಾಲನು ಎಷ್ಟು ಹೇಳಿದರೂ ರೈತ ಹಣ ಪಡೆಯಲು ಒಪ್ಪಲೇ ಇಲ್ಲ. ಕೊನೆಗೆ ಬೇರೆ ದಾರಿಕಾಣದೆ ಗೋಪಾಲ ಕುಂಬಳಕಾಯಿಯನ್ನು ಪುಕ್ಕಟೆಯಾಗಿ ಪಡೆದು ಹಿಂತಿರುಗಿದ. ಮೇಲಿನ ಸನ್ನಿವೇಶವನ್ನು ಓದಿದಿರಲ್ಲವೇ? ಇದನ್ನು ಸಂಭಾಷಣೆಯ ರೂಪಕ್ಕೆ ಬದಲಾಯಿಸಿ ಬರೆಯಿರಿ.

**ಚಟುವಟಿಕೆ 3**

ಒಂದೇ ವೃಕ್ಷದ ಕೊಂಬೆಗಳು
ನಾವು ಒಂದೇ ಬಳ್ಳಿಯ ಹೂವುಗಳು
ಒಂದೇ ನೆಲದೊಳು ಬೇರೂರುತ
ನಾವು ಒಂದೇ ಮುಗಿಲಿಗೆ ನೆಗೆಯುವೆವು

ಮೇಲಿನ ಹಾಡನ್ನು ಓದಿದಿರಲ್ಲವೇ? ಇದು ನಾವೆಲ್ಲರೂ ಒಂದೇ ಎಂದು ಸಾರುತ್ತದಲ್ಲವೇ? ಈ ಕವನದ ಸಾಲುಗಳ ಸ್ವಾರಸ್ಯವನ್ನು ನಿಮ್ಮದೇ ವಾಕ್ಯಗಳಲ್ಲಿ ಬರೆಯಿರಿ.

**ಚಟುವಟಿಕೆ 4**

ನೀವು ನಿಮ್ಮ ಶಾಲಾ ಕೋಕೋ/ಕಬಡ್ಡಿ ತಂಡದ ನಾಯಕ/ನಾಯಕಿಯಾಗಿರುವಿರಿ ಎಂದು ಊಹಿಸಿರಿ. ಓರ್ವ ಉತ್ತಮ ನಾಯಕ / ನಾಯಕಿಯಾಗಿ ನೀವು ನಿಮ್ಮ ತಂಡವನ್ನು ಹೇಗೆ ಮುನ್ನಡೆಸುವಿರಿ ? ಎಂಬ ವಿಚಾರದ ಬಗ್ಗೆ ಟಿಪ್ಪಣಿ ಬರೆಯಿರಿ.

**ಚಟುವಟಿಕೆ 5**

ನಮ್ಮ ಮಾತು ಹೇಗಿರಬೇಕು?

ಹಿರಿಯರೊಂದಿಗೆ, ಕಿರಿಯರೊಂದಿಗೆ ಸಂಭಾಷಣೆ ನಡೆಸುವಾಗ ಯಾವ ರೀತಿಯಲ್ಲಿ ಮಾತನಾಡಬೇಕು?

'ಮಾತಿನ ಮಹತ್ವ' ಈ ವಿಷಯದ ಬಗ್ಗೆ ಸಾಹಿತ್ಯ ಸಭೆಯಲ್ಲಿ ಭಾಷಣ ಮಾಡಲು ಲೇಖನ ತಯಾರಿಸಿರಿ.

* * *